# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಜೂನ್ 29, 2024

ಸಂಪುಟ : 51 ಸಂಚಿಕೆ : 46 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಸಾಕ್ಷಿಗಳು ತಿರುಗಿ ಬೀಳುವುದೇ ಶಿಕ್ಷೆಗೆ ಅಡ್ಡಿ

### ಶೇ.85ರಷ್ಟು ಪ್ರಕರಣದಲ್ಲಿ ಶಿಕ್ಷೆಯಾಗುತ್ತಿಲ್ಲ: ಪರಿಶಿಷ್ಟರ ಕುಂದು ಕೊರತೆ ಸಭೆಯಲ್ಲಿ ಎಸ್ಪಿ

ದಾವಣಗೆರೆ ಜೂ. 28 - ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾದ ಪ್ರಕರಣಗಳಲ್ಲಿ ಸಾಕ್ಷಿಗಳು ತಿರುಗಿ ಬೀಳುವ ಕಾರಣದಿಂದ ಶೇ.80-85ರಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗುತ್ತಿಲ್ಲ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಕರೆಯಲಾಗಿದ್ದ ಎಸ್ಸಿ - ಎಸ್ಟಿ ಕುಂದು ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾಕ್ಷಿಗಳು ನ್ಯಾಯಾಲಯದಲ್ಲಿ ವಿಚಾರಣೆ ಪೂರ್ಣಗೊಳ್ಳುವವರೆಗೂ ಸ್ಥಿರವಾಗಿದ್ದರೆ ಮಾತ್ರ ಶಿಕ್ಷೆ ಕೊಡಿಸಲು ಸಾಧ್ಯ ಎಂದರು.

ಯಾವುದೇ ಪ್ರಕರಣದಲ್ಲಿ ಆರೋಪಿಗಳು ಖುಲಾಸೆಯಾದಾಗ ಆ ಬಗ್ಗೆ ನ್ಯಾಯಾಲಯದ ಉಸ್ತುವಾರಿ ಸಮಿತಿಯಿಂದ ಪರಿಶೀಲನೆ ನಡೆಯುತ್ತದೆ. ಖುಲಾಸೆಗೆ ಕಾರಣವೇನು ಎಂಬುದನ್ನು ಪರಿಗಣಿಸಲಾಗುತ್ತದೆ. ಸಾಕ್ಷಿಗಳು ತಿರುಗಿ ಬೀಳುವುದೇ ಖುಲಾಸೆಗೆ ಪ್ರಮುಖ ಕಾರಣ ಎಂಬುದು ಕಂಡು ಬಂದಿದೆ ಎಂದವರು ಹೇಳಿದರು.

ಪರಿಶಿಷ್ಟರ ಮೇಲಿನ ಜಾತಿ ನಿಂದನೆ ಪ್ರಕರಣಗಳಲ್ಲಿ ಎಫ್.ಐ.ಆರ್. ದಾಖಲಿಸಿದರೂ ಆರೋಪಿಗಳು ಖುಲಾಸೆಯಾಗುತ್ತಿದ್ದಾರೆ ಎಂದು ಹೊನ್ನಾಳಿಯ ಜಿ.ಎಸ್. ತಮ್ಮಣ್ಣ ಅವರು ಸಭೆಯಲ್ಲಿ ಹೇಳಿದಾಗ ಎಸ್ಪಿ ಉಮಾ ಪ್ರಶಾಂತ್ ಈ ಪ್ರತಿಕ್ರಿಯೆ ನೀಡಿದರು.

ಸಾಕ್ಷಿಗಳು ನ್ಯಾಯಾಲಯದ ಪ್ರಕರಣ ಪೂರ್ಣಗೊಳ್ಳುವವರೆಗೆ ತಮ್ಮ ಹೇಳಿಕೆಗೆ ಬದ್ಧವಾಗಿರಬೇಕು. ಈ ಬಗ್ಗೆ ದೂರುದಾರರಿಗೆ ಅರಿವು ಮೂಡಿಸುವಲ್ಲಿ ಸಂಘ - ಸಂಸ್ಥೆಗಳೂ ಕೈ ಜೋಡಿಸಬೇಕು ಎಂದು ಎಸ್ಪಿ ಕರೆ ನೀಡಿದರು.

ದಲಿತರ ಪರ ಹೋರಾಟ ನಡೆಸುವ ಸಂಘಟನೆಗಳ ಪದಾಧಿಕಾರಿಗಳ ವಿರುದ್ಧವೂ ದೂರು ದಾಖಲಿಸುವ ಘಟನೆಗಳು ನಡೆಯುತ್ತಿವೆ. ಇದರಿಂದ ದಲಿತ ಪರ ಹೋರಾಟ ನಡೆಸುವವರು ಸಮಸ್ಯೆ ಎದುರಿಸುವಂತಾಗಿದೆ ಎಂದು ದಲಿತ ಮುಖಂಡ ರಂಗನಾಥ್ ಹೇಳಿದರು.

ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುವವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡ ಬೆನ್ನಲ್ಲೇ ಬಿಡುಗಡೆ ಮಾಡುತ್ತಿದ್ದಾರೆ ಎಂದು ಚನ್ನಗಿರಿಯ ಚಿರಂಜೀವಿ ಆಕ್ಷೇಪಿಸಿದರು.

ಈ ಬಗ್ಗೆ ಉತ್ತರಿಸಿದ ಎಸ್ಪಿ ಉಮಾ ಪ್ರಶಾಂತ್, ನ್ಯಾಯಾಲಯದ ಆದೇಶದ ಅನ್ವಯ 7 ವರ್ಷಕ್ಕಿಂತ ಕಡಿಮೆ ಶಿಕ್ಷೆಯಾಗುವ ಪ್ರಕರಣಗಳಲ್ಲಿ ಆರೋಪಿಗಳನ್ನು (5ನೇ ಪುಟಕ್ಕೆ)



#### ದೂರು ದಾಖಲಿಸದಿದ್ದರೆ ಕ್ಯೂ.ಆರ್. ಕೋಡ್ ಸ್ಕ್ಯಾನ್ ಮಾಡಿ

ನೊಂದವರು ದೂರು ಕೊಡಲು ಹೋದಾಗ ಪೊಲೀಸರು ಎಫ್‌ಐಆರ್ ದಾಖಲಿಸದಿದ್ದರೆ, ಠಾಣೆಯಲ್ಲಿರುವ ಕ್ಯೂಆರ್ ಕೋಡ್ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಮೆಸೇಜ್ ಹಾಕಿ, ಇಲ್ಲವೇ ನಮಗೆ ಕರೆ ಮಾಡಿ. ಈ ಬಗ್ಗೆ ಪರಿಶೀಲಿಸಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

ಜಗಳೂರು ತಾಲ್ಲೂಕಿನ ಪಲ್ಲಾಗಟ್ಟೆ ಸುಧಾ ಅವರು ಮಾತನಾಡಿ, ನನ್ನ ಮಗಳಿಗೆ ಆದ ತೊಂದರೆ ಬಗ್ಗೆ ಬಿಳಚೋಡು ಠಾಣೆಯಲ್ಲಿ ದೂರು ಕೊಡಲು ಹೋದಾಗ ಬೆಳಿಗ್ಗೆಯಿಂದ ಸಂಜೆವರೆಗೂ ಕೂರಿಸಿ, ಕೇಸ್ ತೆಗೆದುಕೊಳ್ಳದೇ ವಾಪಸ್ ಕಳಿಸಿದ್ದರು ಎಂದರು.

ಆಗ ಮಾತನಾಡಿದ ಎಸ್ಪಿ ಉಮಾ ಪ್ರಶಾಂತ್, ಪೊಲೀಸರು ಸಾರ್ವಜನಿಕರ ದೂರು ಸ್ವೀಕರಿಸದಿರುವ ಬಗ್ಗೆ ತಿಳಿಸಿದರೆ, ಠಾಣೆಗಳಲ್ಲಿರುವ ಸಿಸಿ ಕ್ಯಾಮೆರಾ ಮೂಲಕ ಪರಿಶೀಲಿಸಿ, ಶಿಸ್ತುಕ್ರಮ ಕೈಗೊಳ್ಳುತ್ತೇವೆ ಎಂದೂ ಹೇಳಿದರು. ಇಲಾಖೆಯಿಂದಲೂ ಪೊಲೀಸರನ್ನೇ ಮಾರುವೇಷದಲ್ಲಿ ಠಾಣೆಗಳಿಗೆ ಕಳುಹಿಸಿ ದೂರು ಕೊಡಿಸುವ ಮೂಲಕ ಸತ್ಯಾಸತ್ಯತೆ ಪರಿಶೀಲಿಸಲಾಗುತ್ತಿದೆ. ನಮ್ಮ ಇಲಾಖೆಯಿಂದಲೇ ಹೋದವರ ಬಳಿ ದೂರು ದಾಖಲಿಸಿಕೊಳ್ಳದ ಹಾಗೂ ಸರಿಯಾಗಿ ವರ್ತಿಸದ ಮೂವರು ಸಿಬ್ಬಂದಿಗಳನ್ನು ಅಮಾನತ್ತುಗೊಳಿಸಲಾಗಿದೆ ಎಂದರು.

## ಭದ್ರಾ ಮೇಲ್ದಂಡೆ: ಹಣ ಬಿಡುಗಡೆಗೆ ಸಿಎಂ ಆಗ್ರಹ



ಬೆಂಗಳೂರು, ಜೂ. 28 - ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಸಮಾನಾಂತರವಾಗಿ ಮೇಕೆದಾಟು ಬಳಿ ಜಲಾಶಯ ನಿರ್ಮಾಣಕ್ಕೆ ಅನುಮತಿ, ಭದ್ರಾ ಮೇಲ್ದಂಡೆ ಯೋಜನೆಗೆ ನೀಡಿರುವ ಭರವಸೆಯಂತೆ ಹಣ ಬಿಡುಗಡೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬೆಂಗಳೂರು ಮತ್ತು ಸುತ್ತಮುತ್ತಲ ಜನ ವಸತಿ ಪ್ರದೇಶಗಳಿಗೆ ನಿರಂತರ ಕುಡಿಯುವ ನೀರು ಪೂರೈಕೆ ಹಾಗೂ ಅಣೆಕಟ್ಟೆಯಿಂದ ಹರಿಯುವ ನೀರಿನಿಂದ ವಿದ್ಯುತ್ ಉತ್ಪಾದಿಸಲು 67 ಟಿಎಂಸಿ ಸಾಮರ್ಥ್ಯದ ಮೇಕೆದಾಟು ಯೋಜನೆ ರೂಪಿಸಲಾಗಿದೆ, ಈ ಪ್ರಸ್ತಾವನೆಗೆ ತುರ್ತಾಗಿ ಅನುಮತಿ ಕೊಡಿ ಎಂದಿದ್ದಾರೆ.

ಕೇಂದ್ರದ ಮುಂದೆ ಬಾಕಿ ಇರುವ ರಾಜ್ಯದ ಯೋಜನೆಗಳ ಅನುಷ್ಠಾನ ಸಂಬಂಧ ನಿನ್ನೆ ಕೇಂದ್ರದಲ್ಲಿ ಕರ್ನಾಟಕ ಪ್ರತಿನಿಧಿಸುವ ಸಚಿವರು ಮತ್ತು ಸಂಸದರೊಂದಿಗೆ ಚರ್ಚೆ ನಂತರ ದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮಿಳು ನಾಡಿಗೆ ನಿಗದಿ ಪಡಿಸಿರುವ ಕಾವೇರಿ ನೀರನ್ನು ಹರಿಸಿದ ನಂತರ ಸಮುದ್ರಕ್ಕೆ ಪೋಲಾಗುವ ನೀರನ್ನು ಸಂಗ್ರಹಿಸುವ ಯೋಜನೆ ಇದಾಗಿದೆ ಎಂದರು.

ನಾಳೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲೂ ಮೇಕೆದಾಟು ಹಾಗೂ ಭದ್ರಾ ಯೋಜನೆ ಪ್ರಸ್ತಾಪ ಮಾಡುವುದಲ್ಲದೆ, ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಹಣ ಬಿಡುಗಡೆಗೆ ಮನವಿ ಮಾಡುತ್ತೇವೆ ಎಂದರು.

ಮೇಕೆದಾಟು ಯೋಜನೆ 2018 ರಿಂದ ಕೇಂದ್ರದಲ್ಲಿ ಬಾಕಿ ಇದೆ, ಅನುಷ್ಠಾನಕ್ಕೆ ಹಲವು ಹಂತಗಳ ಅನುಮತಿ ಅಗತ್ಯವಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದಿಂದ ಪರಿಸರ ಅನುಮತಿಯನ್ನು ಶೀಘ್ರವಾಗಿ ಮಾಡಿಕೊಡುವಂತೆ ಒತ್ತಾಯಿಸಲಾಗುವುದು ಎಂದು ಹೇಳಿದರು.

ಭದ್ರಾ ಯೋಜನೆ ಮೂಲಕ 2.25 ಲಕ್ಷ ಹೆಕ್ಟೇರ್ ಹೆಚ್ಚುವರಿ ನೀರಾವರಿ ಮೂಲಕ ವ್ಯವಸಾಯ ಮತ್ತು ಕುಡಿಯುವ ನೀರು ಒದಗಿಸುವ ಪ್ರಸ್ತಾವನೆಯು 2020 ರಿಂದ ಕೇಂದ್ರ ಸರ್ಕಾರದಲ್ಲಿ ಬಾಕಿ ಇದೆ, ಅದಕ್ಕೂ ಅನುಮತಿ ನೀಡಿ ಎಂದು ಕೇಳಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು. (2ನೇ ಪುಟಕ್ಕೆ)

## ಯಡಿಯೂರಪ್ಪ ಬಂಧನಕ್ಕೆ ನೀಡಿದ್ದ ತಡೆಯಾಜ್ಞೆ ವಿಸ್ತರಣೆ

ಬೆಂಗಳೂರು, ಜೂ. 28 - ಪೋಕ್ಸೋ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಬಂಧಿಸದಂತೆ ಸಿ.ಐ.ಡಿ.ಗೆ ನೀಡಲಾಗಿದ್ದ ತಡೆಯಾಜ್ಞೆಯನ್ನು ಕರ್ನಾಟಕ ಹೈಕೋರ್ಟ್ ಎರಡು ವಾರಗಳ ಕಾಲ ವಿಸ್ತರಿಸಿದೆ.



ಪೋಕ್ಸೋ ಪ್ರಕರಣ

ಅಪ್ರಾಪ್ತ ಬಾಲಕಿ ಹಾಗೂ ಅವರ ತಾಯಿ ಈ ವಿಷಯದಲ್ಲಿ ಮೌನವಾಗಿರಲು ಯಡಿಯೂರಪ್ಪ ಹಾಗೂ ಇತರೆ ಮೂವರು ಹಣ ನೀಡಿದ್ದರು ಎಂದು ಸಿ.ಐ.ಡಿ. ದಾಖಲಿಸಿದ ಆರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

ಆರೋಪಿಗಳಾದ ವೈ.ಎಂ. ಅರುಣ್, ಎಂ. ರುದ್ರೇಶ್ ಹಾಗೂ ಜಿ. ಮರಿಸ್ವಾಮಿ ಅವರು ಯಡಿಯೂರಪ್ಪ ಆಪ್ತರಾಗಿದ್ದಾರೆ. ಅವರು ಹಣ ನೀಡಿದ್ದರು ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ. ಶೀಘ್ರಪಥ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ದಾಖಲಿಸಲಾಗಿದೆ. ಆರೋಪಗಳನ್ನು ತಳ್ಳಿ ಹಾಕಿರುವ ಯಡಿಯೂರಪ್ಪ, ತಮ್ಮ ವಿರುದ್ಧದ ಪ್ರಕರಣ ವಜಾಗೊಳಿಸಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ಯಡಿಯೂರಪ್ಪ ಅರ್ಜಿಯ ಬಗ್ಗೆ ಆಕ್ಷೇಪ (2ನೇ ಪುಟಕ್ಕೆ)

## ಅಕ್ರಮ ಹಣ ಪ್ರಕರಣ : ಮಾಜಿ ಮುಖ್ಯಮಂತ್ರಿ ಸೊರೇನ್‌ಗೆ ಜಾಮೀನು



ರಾಂಚಿ, ಜೂ. 28 – ಜಮೀನು ಹಗರಣ ಹಾಗೂ ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್‌ಗೆ ಜಾರ್ಖಂಡ್ ಹೈಕೋರ್ಟ್ ಜಾಮೀನು ನೀಡಿದೆ.

ಜೂನ್ 13ರಂದು ನ್ಯಾಯಾಲಯ ಸೊರೇನ್ ಜಾಮೀನು ಅರ್ಜಿಯ ತೀರ್ಪನ್ನು ಕಾಯ್ದಿರಿಸಿತ್ತು.

ಜೆ.ಎಂ.ಎಂ. ಕಾರ್ಯಾಕಾರಿ ಅಧ್ಯಕ್ಷರೂ ಆಗಿರುವ ಸೊರೇನ್ ಅವರನ್ನು ಜಾರಿ ನಿರ್ದೇಶನಾಲಯ ಜನವರಿ 31ರಂದು ಬಂಧಿಸಿತ್ತು. ನ್ಯಾಯಾಲಯ ಜಾಮೀನು ನೀಡಿದ ನಂತರ ಅವರನ್ನು ಸಂಜೆ 4 ಗಂಟೆಗೆ ಬಿರ್ಸಾ ಮುಂಡಾ ಜೈಲಿನಿಂದ ಬಿಡುಗಡೆ ಮಾಡಲಾಗಿದೆ.

ಸೊರೇನ್ ತಪ್ಪು ಮಾಡಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅರ್ಜಿದಾರರು (2ನೇ ಪುಟಕ್ಕೆ)



## ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರ: ಪ್ರತಿಭಟನೆ

### ಶಾಸಕ ಹರೀಶ್ ನೇತೃತ್ವದಲ್ಲಿ ಡಿಸಿ ಕಚೇರಿ ಎದುರು ಪ್ರತಿಭಟಿಸಿದ ಬಿಜೆಪಿ ಮುಖಂಡರು

ದಾವಣಗೆರೆ, ಜೂ.28- ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಸರ್ಕಾರಿ ಹಣದ ವರ್ಗಾವಣೆಯ ಗೋಲ್‌ಮಾಲ್ ಹಾಗೂ ಚುನಾವಣಾ ವೆಚ್ಚಕ್ಕೆ ಹಣ ಬಳಕೆ ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಸೌಲಭ್ಯ ವಂಚಿತ ಎಸ್.ಟಿ. ಸಮುದಾಯಕ್ಕೆ ಸೂಕ್ತ ನ್ಯಾಯ ಒದಗಿಸಿಕೊಡುವಂತೆ ಪ್ರತಿಭಟನಾಕಾರರು ಇದೇ ಸಂದರ್ಭದಲ್ಲಿ ಆಗ್ರಹಿಸಿದರು.

ಹರಿಹರ ಶಾಸಕ ಬಿ.ಪಿ. ಹರೀಶ್, ಲೋಕಸಭಾ ಚುನಾವಣೆಯ ಬಿಜೆಪಿ ಪರಾಜಿತ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಘಟನೆ ಕೂಡ ನಡೆಯಿತು. ಇದಲ್ಲದೇ ಪ್ರತಿಭಟನಾಕಾರರು ಡಿಸಿ ಕಚೇರಿ ಗೇಟ್ ಬಳಿ ಇದ್ದ ಬ್ಯಾರಿಕೇಡ್ ತಳ್ಳಿ ಹಾಕುವ ಮೂಲಕ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗುವ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ತಕ್ಷಣ ಸ್ಥಳದಲ್ಲಿದ್ದ ಪೊಲೀಸರು ಪ್ರತಿಭಟನಾಕಾರರನ್ನು ನಿಯಂತ್ರಿಸಿ, ವಾತಾವರಣ ತಿಳಿಗೊಳಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಮುಖಂಡರು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ಹಣ ವರ್ಗಾವಣೆಯ ಅವ್ಯವಹಾರ ನಡೆದಿದ್ದು, ಈ ಹಣವನ್ನು ಕಾಂಗ್ರೆಸ್‌ನ ಚುನಾವಣಾ ವೆಚ್ಚಕ್ಕೆ ಬಳಕೆ ಮಾಡಲಾಗಿದೆ ಎಂಬ ಶಂಕೆ ವ್ಯಕ್ತಪಡಿಸಿದರು.

ಅವ್ಯವಹಾರಕ್ಕೆ ಸಂಬಂಧಿಸಿದಂತೆ ನನ್ನ ಸಹಿಯನ್ನು ಫೋರ್ಜರಿ ಮಾಡಲಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ್ ಅವರು ಹೇಳುತ್ತಿದ್ದಾರೆ. ಈ ಬಗ್ಗೆಯೂ ಸಮಗ್ರ ತನಿಖೆ ಕೈಗೊಳ್ಳಬೇಕು. ಹಣಕಾಸು ಖಾತೆ ಹೊಂದಿರುವ ಸಿಎಂ ಸಿದ್ಧರಾಮಯ್ಯ ಇದರ ಹೊಣೆ ಹೊರಬೇಕು. ಸಚಿವ ನಾಗೇಂದ್ರ ಅವರ ರಾಜೀನಾಮೆ ಒಂದೇ ಇದಕ್ಕೆ ಪರಿಹಾರವಲ್ಲ. ಪ್ರಕರಣದ ಹಿಂದಿರುವ ಕಾಣದ ಕೈಗಳ ಬಗ್ಗೆ ತನಿಖೆ ಆಗಬೇಕೆಂದು ಒತ್ತಾಯಿಸಿದರು.

ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕೆ ಬಿಡುಗಡೆಯಾದ ಹಣದ (2ನೇ ಪುಟಕ್ಕೆ)

## ಸಿಎಂ ಸ್ಥಾನಕ್ಕೆ ಲಿಂಗಾಯತರನ್ನು ಪರಿಗಣಿಸಿ : ಶ್ರೀಶೈಲ ಜಗದ್ಗುರು



ಚಿಕ್ಕೋಡಿ, ಜೂ. 28 – ಮುಖ್ಯಮಂತ್ರಿ ಸ್ಥಾನ ಬದಲಾವಣೆ ಹಾಗೂ ಉಪ ಮುಖ್ಯಮಂತ್ರಿ ಸ್ಥಾನಗಳ ವಿಸ್ತರಣೆ ಪ್ರಕ್ರಿಯೆಗೆ ಮುಂದಾದರೆ ವೀರಶೈವ-ಲಿಂಗಾಯತ ಮುಖಂಡರನ್ನು ಪರಿಗಣಿಸಬೇಕು ಎಂದು ಶ್ರೀಶೈಲ ಪೀಠದ ಜಗದ್ಗುರು ಶ್ರೀ ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಆಗ್ರಹಿಸಿದ್ದಾರೆ.

ತಾಲ್ಲೂಕಿನ ಯಡೂರ ಗ್ರಾಮದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷಕ್ಕೆ ವೀರಶೈವ ಲಿಂಗಾಯತರ ಕೊಡುಗೆ ಅಪಾರವಾಗಿದೆ. ವೀರಶೈವ - ಲಿಂಗಾಯತ ನಾಯಕರನ್ನು ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಕಡೆಗಣಿಸಬಾರದು ಎಂದು ಹೇಳಿದರು.

ವೀರಶೈವ - ಲಿಂಗಾಯತ ಮತದಾರರು ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಮೇಲೆ ವಿಶ್ವಾಸ ಇಟ್ಟು ಹೆಚ್ಚಿನ ಮತಗಳು ನೀಡಿ ಅಧಿಕಾರಕ್ಕೆ ತಂದಿದ್ದಾರೆ. ಸದ್ಯಕ್ಕೆ ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಬೇರೆಯವರನ್ನು ತರಬೇಕು ಮತ್ತು ಉಪ ಮುಖ್ಯಮಂತ್ರಿ ಸ್ಥಾನಗಳನ್ನು ಹೆಚ್ಚಿಗೆ ಮಾಡಬೇಕು ಎಂದು ಚರ್ಚೆ ನಡೆಯುತ್ತಿದೆ. ಏನಾದರೂ ಬದಲಾವಣೆ ಮಾಡಿದರೆ ವೀರಶೈವ ಲಿಂಗಾಯತ ಸಮುದಾಯದ ನಾಯಕರನ್ನು ಕಡೆಗಣಿಸಬಾರದು ಎಂದು ಹೇಳಿದರು. ನಮ್ಮ ಸಮುದಾಯದಲ್ಲಿ ಹಲವು ನಾಯಕರು (2ನೇ ಪುಟಕ್ಕೆ)


Admission Open
BCA BACHELOR OF COMPUTER APPLICATION | BA BACHELOR OF ARTS
Integrated IAS, KAS and Banking Coaching
Winners First Grade College
2nd main, P.J. Extn, Davangere
9886997892 • 9986520992


## ಪ್ರಾಂಶುಪಾಲ, ಉಪಪ್ರಾಂಶುಪಾಲ ಬಂಧನ

ನವದೆಹಲಿ, ಜೂ. 28 – ನೀಟ್ ಅಕ್ರಮಕ್ಕೆ ಸಂಬಂಧಿಸಿದಂತೆ ಜಾರ್ಖಂಡ್‌ನ ಹಜಾರಿಬಾಗ್‌ನ ಶಾಲೆಯ ಪ್ರಾಂಶುಪಾಲ ಹಾಗೂ ಉಪ ಪ್ರಾಂಶುಪಾಲರನ್ನು ಸಿ.ಬಿ.ಐ. ಬಂಧಿಸಿದೆ. ಮೇ 5ರಂದು ನೀಟ್ ಪರೀಕ್ಷೆ ನಡೆಸಲಾದ ಒಯಸಿಸ್ ಸ್ಕೂಲ್‌ನ ಪ್ರಾಂಶುಪಾಲ ಹಾಗೂ ಉಪ ಪ್ರಾಂಶುಪಾಲರನ್ನು ಬಂಧಿಸಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಜಿಲ್ಲೆಯ ಇನ್ನೂ ಐವರನ್ನು ಪ್ರಶ್ನಿಸಲಾಗಿದೆ.


District 17
ಹೋಟೆಲ್ ಬಾಡಿಗೆಗಿದೆ
ದಾವಣಗೆರೆ ನಗರದ ಬೈಪಾಸ್ ರಸ್ತೆಯಲ್ಲಿರುವ District -17 ಹೋಟೆಲ್ ಅನ್ನು ರೆಸ್ಟೋರೆಂಟ್, ಜಿಮ್, ಸ್ಕೂಲ್, ಹಾಸ್ಟೆಲ್, ಟೈಲ್ಸ್/ಪ್ಲೈವುಡ್ ಶಾಪ್‌ಗೆ, ಆಫೀಸ್‌ಗೆ ಬಾಡಿಗೆಗೆ ಕೊಡಲಾಗುವುದು.
97319 99918


## ಆವರಗೆರೆ, ಭಾರತ್ ಕಾಲೋನಿ, ಬಸಾಪುರ ಗ್ರಾಮದ ರಾಜಕಾಲುವೆ ಹೂಳು ತೆಗೆಯಲು ಮೇಯರ್ ನಿರ್ದೇಶನ



ದಾವಣಗೆರೆ, ಜೂ.28- ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಆವರಗೆರೆ, ಭಾರತ್ ಕಾಲೋನಿ, ಬಸಾಪುರ ಗ್ರಾಮದಲ್ಲಿನ ರಾಜಕಾಲುವೆಗಳಿಗೆ ಆಯುಕ್ತರು, ಮೇಯರ್, ಪಾಲಿಕೆಯ ಕಾಂಗ್ರೆಸ್ ಸದಸ್ಯರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಆದಷ್ಟು ಬೇಗ ಉಳಿದಿರುವ ಹೂಳೆತ್ತುವ ಕಾರ್ಯ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ, ಮೇಯರ್ ವಿನಾಯಕ ಪೈಲ್ವಾನ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಅಬ್ದುಲ್ ಲತೀಫ್, ಮೀನಾಕ್ಷಿ ಜಗದೀಶ್, ಆಡಳಿತ ಪಕ್ಷದ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಶಿವಲಿಂಗ ಕೊಟ್ರಯ್ಯ, ಎ.ಇ ಮನೋಹರ್, ಪ್ರೀತಂ ಸೇರಿದಂತೆ ಅಧಿಕಾರಿಗಳ ತಂಡವು ಭೇಟಿ ನೀಡಿ ಪರಿಶೀಲಿಸಿತು.

ಎರಡೂವರೆ ಕಿಲೋಮೀಟರ್‌ವರೆಗೆ ಹೂಳೆತ್ತುವ ಕಾರ್ಯ ನಡೆದಿದ್ದು, ಉಳಿದಿರುವ ಒಂದೂವರೆ ಕಿಲೋಮೀಟರ್ ವರೆಗಿನ ಹೂಳು ಆದಷ್ಟು ಬೇಗ ತೆರವುಗೊಳಿಸಿ. ಮಳೆಗಾಲ ಶುರುವಾಗಿರುವುದರಿಂದ ಮಳೆ ನೀರು ನಿಲ್ಲದಂತೆ ಎಚ್ಚರ ವಹಿಸಬೇಕು. ಹೂಳೆತ್ತುವ ಕಾರ್ಯ ಆದಷ್ಟು ಬೇಗ ಮುಗಿಸಿ, ನೀರು ಸರಾಗವಾಗಿ ಹೋಗುವಂತೆ ಕಾರ್ಯನಿರ್ವಹಿಸುವಂತೆ ಸೂಚಿಸಲಾಯಿತು. ಅಲ್ಲದೇ, ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಮನೆಯೊಳಗೆ ನೀರು ನುಗ್ಗುವುದು, ಚರಂಡಿಯಲ್ಲಿ ನೀರು ಹೆಚ್ಚಾಗುವುದು, ರಸ್ತೆ ಮೇಲೆ ನೀರು ಹರಿಯುವುದಕ್ಕೆ ಕಡಿವಾಣ ಹಾಕುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಯಿತು.

ಈ ವೇಳೆ ಮಾತನಾಡಿದ ಮೇಯರ್ ವಿನಾಯಕ ಪೈಲ್ವಾನ್ ಹಾಗೂ ಗಡಿಗುಡಾಳ್ ಮಂಜುನಾಥ್ ಅವರು, ರಾಜಕಾಲುವೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು. ಕಾಲುವೆಯಲ್ಲಿನ ಹೂಳೆತ್ತುವ ಕಾರ್ಯ ಸಮಾರೋಪಾದಿಯಲ್ಲಿ ನಡೆಯುತ್ತಿದೆ. ಅದೇ ರೀತಿಯಲ್ಲಿ ಉಳಿದ ಕೆಲಸ ಮುಗಿಸಿ, ಜನರಿಗೆ ಅನಾನುಕೂಲವಾಗದಂತೆ ನೋಡಿಕೊಳ್ಳುವಂತೆ ನಿರ್ದೇಶನ ನೀಡಲಾಯಿತು ಎಂದು ಮಾಹಿತಿ ನೀಡಿದರು.

ದಾವಣಗೆರೆ ಜಿಲ್ಲೆಯ ಅಭಿವೃದ್ಧಿಗೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಮನೂರು ಶಿವಶಂಕರಪ್ಪರ ಕೊಡುಗೆ ಅಪಾರ ಎಂಬುದು ಪ್ರತಿಯೊಬ್ಬರಿಗೂ ಗೊತ್ತಿರುವ ವಿಚಾರ. ಆದರೆ, ವಿಪಕ್ಷ ಸದಸ್ಯರು ವಿನಾಕಾರಣ ಆರೋಪ ಮಾಡುತ್ತಾರೆ. ಮೊದಲಿನಿಂದಲೂ ಮಲ್ಲಿಕಾರ್ಜುನ್ ಅವರ ನಿರ್ದೇಶನ ಹಾಗೂ ಮಾರ್ಗದರ್ಶನದಂತೆ ಕೆಲಸ ಮಾಡುತ್ತೇವೆ. ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಇಲ್ಲಿನವರೇ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಬಿಜೆಪಿ ಆಡಳಿತದಲ್ಲಿದ್ದಾಗ ಜಿಲ್ಲೆಯಲ್ಲಿ ಐವರು ಶಾಸಕರಿದ್ದರೂ ಸಹ ಜಿಲ್ಲಾ ಉಸ್ತುವಾರಿ ಸಚಿವರು ಯಾಕೆ ಆಗಲಿಲ್ಲ ? ಬೆಂಗಳೂರಿನಿಂದ ಇಲ್ಲಿಗೆ ಬಂದು ಜಿಲ್ಲಾ ಉಸ್ತುವಾರಿ ಸಚಿವರು ಏನು ಮಾಡಿದರು ? ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಸಚಿವರು, (5ನೇ ಪುಟಕ್ಕೆ)


ಶ್ರೀಮತಿ ಪಾರ್ವತಮ್ಮ ನಿಧನ



ಶ್ರೀಮತಿ ಪಾರ್ವತಮ್ಮ ಎಂ.ಸಿ.
ಕೋಂ. ಚನ್ನಬಸಪ್ಪ ಎಂ.
ನಿವೃತ್ತ ನಗರ ಯೋಜನಾ ಸಹಾಯಕ ನಿರ್ದೇಶಕರು, ಕಾಕನೂರು.

ಇವರು ದಿನಾಂಕ : 28.6.2024 ರ ಶುಕ್ರವಾರ ಬೆಳಿಗ್ಗೆ 8.45 ನಿಮಿಷಕ್ಕೆ ನಿಧನರಾಗಿದ್ದು, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 29.06.2024ರ ಶನಿವಾರ ಮಧ್ಯಾಹ್ನ 11.00ಕ್ಕೆ ದಾವಣಗೆರೆಯ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ : ಶ್ರೀ ಎಂ. ಚನ್ನಬಸಪ್ಪ
ಶ್ರೀಮತಿ ಸರಿತಾ ಗಿರೀಶ್ ಮತ್ತು ಮಕ್ಕಳು
ಶ್ರೀಮತಿ ಗಾಯತ್ರಿ ಜಗದೀಶ್ ಮತ್ತು ಮಕ್ಕಳು
ಶ್ರೀಮತಿ ಮಂಗಳ ರಾಜಶೇಖರ್ ಮತ್ತು ಮಕ್ಕಳು
ಮಲ್ಲಪ್ಪರ ವಂಶಸ್ಥರು, ಕಾಕನೂರು ಹಾಗೂ ಬಂಧು-ಮಿತ್ರರು. ಫೋ. : 94491 72613

# ವಾಡಿಕೆಗಿಂತ ಹೆಚ್ಚು ಮಳೆ : ಬಿತ್ತನೆ ಬೀಜ, ರಸಗೊಬ್ಬರಕ್ಕೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಿ

## ಅಧಿಕಾರಿಗಳಿಗೆ ಜಿಲ್ಲಾ ಪಂಚಾಯ್ತಿ ಲೆಕ್ಕಾಧಿಕಾರಿ ಸೌಮ್ಯಶ್ರೀ ನಿರ್ದೇಶನ



ಹರಿಹರ, ಜೂ.28- ತಾಲ್ಲೂಕಿನಲ್ಲಿ ಮುಂಗಾರು ಮಳೆ ವಾಡಿಕೆಗಿಂತ ಹೆಚ್ಚು ಆಗುತ್ತಿರುವ ಕಾರಣ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕ ಸೇರಿದಂತೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ಎಚ್ಚರಿಕೆ ವಹಿಸುವಂತೆ ಜಿಲ್ಲಾ ಪಂಚಾಯ್ತಿ ಇಲಾಖೆಯ ಲೆಕ್ಕಾಧಿಕಾರಿ ಸೌಮ್ಯಶ್ರೀ ತಿಳಿಸಿದರು. ನಗರದ ತಾ.ಪಂ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ಪಶುಪಾಲನೆ ಇಲಾಖೆಯ ಅಧಿಕಾರಿಗಳು ಜಾನುವಾರುಗಳಿಗೆ ಚರ್ಮಗಂಟು ರೋಗ, ಕರಳು ಬೇನೆ ರೋಗ, ಕಾಲುಬಾಯಿರೋಗ ಲಕ್ಷಣಗಳು ಹಸುಗಳಿಗೆ ಹರಡದಂತೆ ತಡೆಯಲು ಎಚ್ಚರಿಕೆ ವಹಿಸಬೇಕು. ಸಮಯಕ್ಕೆ ತಕ್ಕಂತೆ ಲಸಿಕೆಯನ್ನು ಹಾಕಿ ಹಸುಗಳನ್ನು ಸಂರಕ್ಷಣೆ ಮಾಡವ ನಿಟ್ಟಿನಲ್ಲಿ ಅಧಿಕಾರಿಗಳು ಮುತುವರ್ಜಿ ವಹಿಸಬೇಕು ಎಂದರು.

ಮಳೆಯಿಂದಾಗಿ ಡೈಂಗೋ, ಚಿಕನ್ ಗುನ್ಯಾ, ಮಲೇರಿಯಾ ಸೇರಿದಂತೆ ಹಲವು ಬಗೆಯ ರೋಗ ಲಕ್ಷಣಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಆದ್ದರಿಂದ ಆರೋಗ್ಯ ಇಲಾಖೆಯ ಅಧಿಕಾರಿಗಳು ಸಾರ್ವಜನಿಕರಿಗೆ ಆರೋಗ್ಯದ ಬಗ್ಗೆ ಹೆಚ್ಚು ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಿಸಿಕೊಂಡು ಜಾಗೃತಿಯನ್ನು ಮೂಡಿಸಲು ಮುಂದಾಗಬೇಕಿದೆ. ಜೊತೆಗೆ ಔಷಧೀಯ ದಾಸ್ತಾನು ಕೊರತೆ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು ಎಂದರು.

ಮಳೆಯಾಗುತ್ತಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳು ಹಾಳಾಗುವ ಸಾಧ್ಯತೆಯಿಂದ, ಅಪಘಾತ ಸಂಭವಿಸಿ, ಸಾವು - ನೋವುಗಳು ಹೆಚ್ಚು ಸಂಭವಿಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಲೋಕೋಪಯೋಗಿ ಇಲಾಖೆ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಿ ವಾಹನ ಸವಾರರು ಮತ್ತು ಶಾಲಾ, ಕಾಲೇಜು ಬಸ್ ಗಳಿಗೆ ಯಾವುದೇ ರೀತಿಯ ತೊಂದರೆಗಳು ಬರದಂತೆ ಸರಾಗವಾಗಿ ಓಡಾಡುವುದಕ್ಕೆ ಗುಂಡಿಗಳನ್ನು ಆದಷ್ಟು ಬೇಗ ದುರಸ್ತಿ ಮಾಡಲು ಹೇಳಿದರು.

ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಆಗುವಂತ ಆಹಾರ ಪದಾರ್ಥಗಳನ್ನು ಶಿಕ್ಷಕರು ಅದರ ಗುಣಮಟ್ಟ ಮತ್ತು ಪರಿಶುದ್ಧತೆಯ ಪರೀಕ್ಷೆಯನ್ನು ಮಾಡದೇ ಮಕ್ಕಳಿಗೆ ವಿತರಣೆ ಮಾಡಬಾರದು. ಮಕ್ಕಳ ಬಗ್ಗೆ ಉದಾಸೀನತೆ ತೋರಬೇಡಿ, ಪೌಷ್ಠಿಕ ಆಹಾರ ಪದಾರ್ಥಗಳನ್ನು ಬಾಣಂತಿ ಹಾಗೂ ಗರ್ಭಿಣಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ವಿತರಣೆ ಮಾಡುಬೇಕು. ಮಳೆಗಾಲ ಇರುವುದರಿಂದ ಶಿಥಿಲವಾದ ಕೊಠಡಿಯಲ್ಲಿ ಮಕ್ಕಳಿಗೆ ಪಾಠ ಮಾಡಬಾರದು ಎಂದು ಹೇಳಿದರು.

ಕೃಷಿ ಸಹಾಯಕ ನಿರ್ದೇಶಕ ನಾರನಗೌಡ ಮಾತನಾಡಿ, ತಾಲ್ಲೂಕಿನಲ್ಲಿ ಮುಂಗಾರು ಮಳೆ ವಾಡಿಕೆ 183 ಇದ್ದು, 195 ರಷ್ಟು ಮಳೆಯಾಗಿ ಶೇ.7 ರಷ್ಟು ಹೆಚ್ಚು ಆಗಿದೆ. ಆದರೆ, ಇತ್ತೀಚೆಗೆ ಬಿತ್ತನೆ ಮಾಡಿರುವ ಮೆಕ್ಕೆಜೋಳ, ಜೋಳ, ಸೋಯಬಿನ್ ಸೇರಿದಂತೆ ಇತರೆ ಬೆಳೆಗಳು ಮಳೆಯ ಕೊರತೆಯಿಂದ ರೈತರು ಬಳಲುತ್ತಿದ್ದು, ಸದ್ಯದಲ್ಲಿ ಮಳ ಬಹಳ ಅವಶ್ಯಕತೆ ಇರುತ್ತದೆ. ಕಳೆದ ಬಾರಿ ಬೆಳೆಗಳು ಹಾನಿಯಾದ ರೈತರಿಗೆ 2 ಕೋಟಿ 55 ಲಕ್ಷ ರೂಪಾಯಿ ಬೆಳೆ ಪರಿಹಾರ ನೀಡಲಾಗಿದೆ. ಈ ಬಾರಿ ತಾಲ್ಲೂಕಿನಲ್ಲಿ 6127 ಹೆಕ್ಟೇರ್ ಮೆಕ್ಕೆಜೋಳ, 180 ಹೆಕ್ಟೇರ್ ತೊಗರಿ, 28 ಹೆಕ್ಟೇರ್ ಜೋಳ, 105 ಹೆಕ್ಟೇರ್ ಸೋಯಬಿನ್ ಬಿತ್ತನೆ ಮಾಡಲಾಗಿದೆ ಎಂದು ಹೇಳಿದರು.

ಬಿಇಓ ಎ.ಹನುಮಂತಪ್ಪ ಮಾತನಾಡಿ, ಕಳೆದ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆ ವೇಳೆ ವೆಬ್ ಕಾಸ್ಟಿಂಗ್, ಸಿ.ಸಿ. ಕ್ಯಾಮರಾ ಅಳವಡಿಕೆಯಿಂದ ತಾಲ್ಲೂಕಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಕಡಿಮೆ ಪ್ರಮಾಣದಲ್ಲಿ ಬರುವಂತೆ ಆಯಿತು. ತಾಲ್ಲೂಕಿನಲ್ಲಿ 52 ಶಿಥಿಲವಾದ ಶಾಲಾ ಕೊಠಡಿಯ ದುರಸ್ತಿ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಹೇಳಿದರು.

ಸಿಡಿಪಿಓ ಇಲಾಖೆಯ ಪೂರ್ಣಿಮಾ ಮಾತನಾಡಿ, ತಾಲ್ಲೂಕಿನಲ್ಲಿ 259 ಅಂಗನವಾಡಿ ಕೇಂದ್ರಗಳಿದ್ದು, ಗರ್ಭಿಣಿ ಮಹಿಳೆಯರು 1895 ಹಾಗೂ ಬಾಣಂತಿಯರು 1807 ಇವರಿಗೆ ಪೌಷ್ಠಿಕ ಆಹಾರ, ಜೊತೆಗೆ ಶಾಲಾ ಮಕ್ಕಳಿಗೆ ಪ್ರತಿನಿತ್ಯ ಗುಣಮಟ್ಟದ ಆಹಾರ ಜೊತೆಗೆ ಮೊಟ್ಟೆ, ಹಾಲು, ಶೇಂಗಾ ಚಿಕ್ಕಿ ವಿತರಣೆ ಮಾಡಲಾಗುತ್ತದೆ. ಇದುವರೆಗೂ ಯಾವುದೇ ರೀತಿಯ ಆಹಾರ ಧಾನ್ಯಗಳ ಕೊರತೆ ಇರುವುದಿಲ್ಲ ಎಂದು ಹೇಳಿದರು.

ಆರೋಗ್ಯ ಇಲಾಖೆಯ ಅಬ್ದುಲ್ ಖಾದರ್ ಮತ್ತು ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಹನುಮನಾಯ್ಕ್ ಮಾತನಾಡಿ, ತಾಲ್ಲೂಕಿನಲ್ಲಿ 1 ಡೈಂಗ್ಯೂ ಹಾಗೂ 1 ಚಿಕನ್ ಗುನ್ಯಾ ಪ್ರಕರಣ ದಾಖಲಾಗಿದೆ. ಜನವರಿಯಿಂದ ಇಲ್ಲಿಯವರೆಗೆ 23 ಡೈಂಗ್ಯೂ ರೋಗ ಲಕ್ಷಣಗಳು ಕಾಣಿಸಿಕೊಂಡಿವೆ. ಗ್ರಾಮೀಣ ಪ್ರದೇಶಗಳಲ್ಲಿ ರೋಗ ಹರಡದಂತೆ ಎಚ್ಚರ ವಹಿಸಲು ಪಿಡಿಓ ರವರಿಗೆ, ಶಾಲಾ ಮುಖ್ಯಸ್ಥರಿಗೆ ತಿಳಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾ.ಪಂ ಇಓ ರಾಮಕೃಷ್ಣಪ್ಪ, ಪಶುಪಾಲನೆ ಇಲಾಖೆ ಡಾ. ಸಿದ್ದೇಶ್, ಆಹಾರ ಇಲಾಖೆ ನವೀನ್, ಲೋಕೋಪಯೋಗಿ ಇಲಾಖೆ ಶಿವಮೂರ್ತಿ, ಪಂಚಾಯತ್ ರಾಜ್ ಇಲಾಖೆ ಗಿರೀಶ್, ತಾ.ಪಂ ಲೆಕ್ಕಾಧಿಕಾರಿ ಲಿಂಗರಾಜ್, ಪೂಜಾ, ಶಿವಶಂಕರ್ ಚಿಕ್ಕ ಬಿದರಿ ಹಾಗೂ ಇತರರು ಹಾಜರಿದ್ದರು.

# ಜಿಡ್ಡುಗಟ್ಟಿದ ವಾತಾವರಣದಿಂದ ಅಧೋಗತಿಯಲ್ಲಿ ಆರ್ಥಿಕ ವ್ಯವಸ್ಥೆ

## ಹರಿಹರ ತಾ.ಪಂ. ಸಭೆಯಲ್ಲಿ ಶಾಸಕ ಬಿ.ಪಿ. ಹರೀಶ್ ವ್ಯಾಕುಲತೆ

ತಾಲ್ಲೂಕಿನ ಅನೇಕ ಇಲಾಖೆಗಳಲ್ಲಿ, ಜಿಡ್ಡುಕಟ್ಟಿದಂತಹ ವಾತಾವರಣ ಸೃಷ್ಟಿಯಾಗಿ, ಯಾವುದೇ ರೀತಿಯಲ್ಲಿ ಕೆಲಸಗಳು ಸರಿಯಾಗಿ ಅರ್ಥ ಆಗದೇ ಇರುವುದರಿಂದ, ಅರ್ಥಿಕ ವ್ಯವಸ್ಥೆ ಸಂಪೂರ್ಣ ಅದೋಗತಿಯತ್ತ ಸಾಗಿದೆ ಎಂದು ಶಾಸಕ ಬಿ.ಪಿ ಹರೀಶ್ ಹೇಳಿದರು.

ನಗರದ ತಾ.ಪಂ ಕಚೇರಿಯ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಕ್ಷಣ ಕಾಲ ಭಾಗವಹಿಸಿ ಅವರು ಮಾತನಾಡಿದರು. ತಾಲ್ಲೂಕಿನಲ್ಲಿ ಅನೇಕ ಇಲಾಖೆಯ ಅಧಿಕಾರಿಗಳು ಬಹಳಷ್ಟು ನಿರ್ಲಕ್ಷ್ಯ ತೋರಿದ್ದಾರೆ. ಜನರು ಕಷ್ಟಗಳನ್ನು ಹೇಳಿಕೊಂಡು ಇಲಾಖೆಗೆ ಬಂದಾಗ ಸರಿಯಾದ ರೀತಿಯಲ್ಲಿ ಸ್ಪಂದಿಸುವ ಕೆಲಸ ಮಾಡದೇ, ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಾ ಜನರನ್ನು ಕಚೇರಿಗೆ ಅಲೆದಾಡುವಂತೆ ಮಾಡುತ್ತಿದ್ದು, ಈ ಬೆಳವಣಿಗೆಯನ್ನು ಕೈ ಬಿಡದಿ ದ್ದರೆ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳ ಗಮನಕ್ಕೆ ಹಾಕಿ, ನಿರ್ಲಕ್ಷ್ಯ ತೋರಿರುವ ಅಧಿಕಾರಿ ಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲು ತಿಳಿಸಬೇಕಾಗುತ್ತದೆ ಎಂದು ಶಾಸಕರು ಎಚ್ಚರಿಸಿದರು.

# ಪಕ್ಕದಲ್ಲಿದ್ದರೂ ನೇರ ಮಾತನಾಡದ ಡಿಕೆಶಿ, ಕುಮಾರಸ್ವಾಮಿ



ಬೆಂಗಳೂರು, ಜೂ. 28 - ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಿನ್ನೆ ದೆಹಲಿಯಲ್ಲಿ ನಡೆದ ರಾಜ್ಯವನ್ನು ಪ್ರತಿನಿಧಿಸುವ ಕೇಂದ್ರ ಸಚಿವರೂ ಮತ್ತು ಸಂಸದರ ಸಭೆಯಲ್ಲೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೇರವಾಗಿ ಮುಖಕ್ಕೆ ಮುಖ ಕೊಟ್ಟು ಮಾತನಾಡಲಿಲ್ಲ.

ಒಂದು ಹಂತದಲ್ಲಿ ಶಿವಕುಮಾರ್ ಮತ್ತು ಕುಮಾರಸ್ವಾಮಿ ಅಕ್ಕಪಕ್ಕದ ಆಸನದಲ್ಲಿ ಕುಳಿತಿದ್ದರೂ, ತಮ್ಮ ಎದುರಿಗಿದ್ದ ಕಡತಗಳನ್ನು ನೋಡುತ್ತಿದ್ದರೇ ಹೊರತು ಒಬ್ಬರಿಗೊಬ್ಬರು ಕಣ್ಣಿಗೆ ಕಣ್ಣು ಕೊಟ್ಟು ನೋಡಲಿಲ್ಲ.

ಸಹೋದರ ಎಚ್.ಡಿ.ರೇವಣ್ಣ ಅವರು ಜೈಲು ಸೇರಿದ ಪ್ರಕರಣದ ನಂತರ ಕುಮಾರಸ್ವಾಮಿ ಅವರು ಶಿವಕುಮಾರ್ ಅವರೊಂದಿಗೆ ರಾಜಕೀಯ ಅಂತರ ಕಾಯ್ದುಕೊಂಡಿದ್ದಾರೆ.

ಈ ಹಿಂದೆ ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆ ಸಂದರ್ಭದಲ್ಲೂ ಇವರಿಬ್ಬರ ನಡುವೆ ಇಂತಹದ್ದೇ ಘಟನೆ ಜರುಗಿತ್ತು.

ಸಭೆಯಲ್ಲಿ ಬೆಂಗಳೂರು ವರ್ತುಲ ರಸ್ತೆಗೆ ಸಂಬಂಧಿಸಿದಂತೆ ಶಿವಕುಮಾರ್ ಪ್ರಸ್ತಾಪಿಸಿದಾಗ ಕುಮಾರಸ್ವಾಮಿ ಅವರೇ ಕೇಂದ್ರದ ಪರ ಉತ್ತರ ನೀಡುವ ಸಂದರ್ಭದಲ್ಲೂ ಒಬ್ಬರಿಗೊಬ್ಬರು ಮುಖ ಕೊಟ್ಟು ಮಾತನಾಡಲಿಲ್ಲ.

ಸಭೆಯಲ್ಲಿ ಕೇಂದ್ರದ ಅನುದಾನ ವಿಚಾರ ಬಂದಾಗ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಕುಮಾರಸ್ವಾಮಿ, ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಇಲ್ಲಿ ರಾಜಕೀಯ ಬೇಡ.

ಆದರೆ, ಕೇಂದ್ರದ ಯೋಜನೆಗಳು ಪ್ರಕಟಗೊಂಡ ನಂತರ ಅದಕ್ಕೆ ಸರಿಸಮನಾದ ರಾಜ್ಯದ ಪಾಲನ್ನು ಮೊದಲು ಕೊಡಿ ಎಂದರು. ಅದನ್ನು ಬಿಟ್ಟು ಕೇಂದ್ರದ ಮೇಲೆ ಟೀಕೆ ಮಾಡುವುದರಿಂದ ಪ್ರಯೋಜನವಿಲ್ಲ. ರಾಜ್ಯ ಹಣ ನೀಡದೇ ಕೇಂದ್ರದ ಹಣ ಬಿಡುಗಡೆ ಸಾಧ್ಯವಿಲ್ಲ ಎಂದರು.

# ವಾಲ್ಮೀಕಿ ನಿಗಮದಲ್ಲಿ ಭ್ರಷ್ಟಾಚಾರ

(1ನೇ ಪುಟದಿಂದ) ಅವ್ಯವಹಾರ ನಡೆಸಿ, ಕಾಂಗ್ರೆಸ್ ಸರ್ಕಾರ ಎಸ್ಟಿ ಸಮುದಾಯಕ್ಕೆ ದ್ರೋಹ ಬಗೆದಿದೆ. ಹಿಂದುಳಿದ ವರ್ಗಗಳ ಸಮುದಾಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಮೀಸಲಿರಿಸಿದ್ದ ಸುಮಾರು 24 ಸಾವಿರ ಕೋಟಿ ರೂ. ಗಳನ್ನು ಕಾಂಗ್ರೆಸ್ ಸರ್ಕಾರ ಇತರೆ ಯೋಜನೆಗಳಿಗೆ ಬಳಸಿಕೊಂಡಿರುವುದು ಆ ಸಮುದಾಯಕ್ಕೆ ಮಾಡಿದ ಘೋರ ಅನ್ಯಾಯವಾಗಿದೆ ಎಂದು ಕಿಡಿಕಾರಿದರು.

ಎಸ್ಟಿ ಸಮುದಾಯಕ್ಕೆ ಅನ್ಯಾಯವಾಗಿದ್ದರೂ ಸಹ ಸಂಬಂಧಿಸಿದ ಎಸ್ಟಿ ಮೀಸಲು ಕ್ಷೇತ್ರಗಳಿಂದ ಗೆದ್ದು ಬಂದ ಶಾಸಕರು ಮೌನ ವಹಿಸಿರುವುದು ಸಮುದಾಯಕ್ಕೆ ಮಾಡಿದ ದ್ರೋಹವಾಗಿದೆ ಎಂದರು.

ನಿಗಮದ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ನಡೆದ ಅವ್ಯವಹಾರದಲ್ಲಿ ಹಣಕಾಸು ಇಲಾಖೆ ಹೊಣೆ ಹೊತ್ತಿರುವ ಸಿಎಂ ಸಿದ್ದರಾಮಯ್ಯ ಅವರು ಕೂಡ ರಾಜೀನಾಮೆ ನೀಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರಾಜ್ಯದ ಬೊಕ್ಕಸ ಖಾಲಿ ಮಾಡುವುದಲ್ಲದೇ ಸರಣಿ ರೂಪದಲ್ಲಿ ಬೆಲೆ ಏರಿಕೆ ಮಾಡಿ ಜನರ ಮೇಲೆ ಬರೆ ಎಳೆಯುತ್ತಿದ್ದಾರೆ. ಸಂಪನ್ಮೂಲಗಳನ್ನು ವೃದ್ಧಿಸಿಕೊಳ್ಳಲಾಗದೇ, ಅಭಿವೃದ್ಧಿಯತ್ತ ಹೆಜ್ಜೆ ಹಾಕದೇ ಭ್ರಷ್ಟ ಹಾಗೂ ವೈಫಲ್ಯದ ರಾಜ್ಯ ಸರ್ಕಾರ ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡಿದೆ ಎಂದರು.

ಕಾಂಗ್ರೆಸ್ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಸ್ಥಾನಗಳಿಗೆ ತಿಕ್ಕಾಟ, ಸಚಿವ ಸ್ಥಾನಗಳಿಗೆ ಗುದ್ದಾಟ, ಅನುದಾನಕ್ಕಾಗಿ ಶಾಸಕರುಗಳ ಹೋರಾಟ ಲೂಟಿ ಮಾಡಲಿಕ್ಕೆಂದೇ ನಿರಂತರ ಪೈಪೋಟಿಯಲ್ಲಿ ತೊಡಗಿರುವುದಾಗಿ ಆರೋಪಿಸಿದರು.

ಹಗರಣಕ್ಕೆ ಕಾರಣರಾದವರನ್ನು ತನಿಖೆಯಿಂದ ಪತ್ತೆ ಹಚ್ಚಿ, ಕಾನೂನು ಕ್ರಮ ಕೈಗೊಳ್ಳಬೇಕು. ಎಸ್ಟಿ ಸಮುದಾಯಕ್ಕೆ ನ್ಯಾಯ ಒದಗಿಸುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರಾದ ಶ್ರೀನಿವಾಸ ದಾಸಕರಿಯಪ್ಪ, ಯಶೋದ ಹೆಗ್ಗಪ್ಪ, ಪಿ.ಸಿ. ಶ್ರೀನಿವಾಸ್, ಗೌತಮ್ ಜೈನ್, ವೀರೇಶ್ ಹನಗವಾಡಿ, ಶಿವಾನಂದ್, ಶಿವಪ್ರಸಾದ್, ಲೋಹಿತ್ ಮಂಗೇನಹಳ್ಳಿ, ಎನ್. ಲೋಕೇಶ್, ಗುಮ್ಮನೂರು ಶ್ರೀನಿವಾಸ್, ಆನಗೋಡು ತಿಪ್ಪಣ್ಣ, ತ್ಯಾವಣಗಿ ದೊಡ್ಡೇಶ್, ರಮೇಶ್, ಸಾಲಕಟ್ಟೆ ಸಿದ್ದಪ್ಪ, ಕೃಷ್ಣಮೂರ್ತಿ, ಹೊಸಳ್ಳಿ ವೆಂಕಟೇಶ್, ಹೆಚ್.ಪಿ. ದುರುಗೇಶ್, ಕೆಂಚನಗೌಡ ಮತ್ತಿತರರು ಪಾಲ್ಗೊಂಡಿದ್ದರು.

# ಭದ್ರಾ ಮೇಲ್ದಂಡೆ: ಹಣ ಬಿಡುಗಡೆಗೆ ಸಿಎಂ ಆಗ್ರಹ

(1ನೇ ಪುಟದಿಂದ) 'ನಮ್ಮ ಮೆಟ್ರೋ ರೈಲು' ಯೋಜನೆಯಡಿ ಹಂತ-3ರ ಕಾಮಗಾರಿಗೆ 15,611 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಿದ್ದು, ಅನುಮತಿ ದೊರಕಿಸಿ ಎಂದು ಕೋರಲಿದ್ದೇವೆ ಎಂದರು.

ಕರ್ನಾಟಕಕ್ಕೆ 15ನೇ ಹಣಕಾಸು ಆಯೋಗ ನಿಗದಿಪಡಿಸಿರುವ ಹಣ ಬಿಡುಗಡೆ ಮಾಡಿ. ಅಲ್ಲದೆ, ಎರಡನೆಯ ವರದಿಯಲ್ಲಿ ಫೆರಿಫೆರಲ್ ರಿಂಗ್ ರಸ್ತೆಗೆ 3,000 ಕೋಟಿ ರೂ. ಮತ್ತು ಕೆರೆ ಹಾಗೂ ಜಲಮೂಲಗಳ ಅಭಿವೃದ್ಧಿಗೆ 3,000 ಕೋಟಿ ರೂ. ಸೇರಿ ಒಟ್ಟು 11,495 ಕೋಟಿ ರೂ. ನೀಡಲು ಶಿಫಾರಸ್ಸು ಮಾಡಲಾಗಿದೆ. ಈ ಅನುದಾನ ಹಾಗೂ ವಿಶೇಷ ಅನುದಾನವನ್ನು ಕೂಡಲೇ ಬಿಡುಗಡೆ ಮಾಡುವಂತೆ ಮನವಿ ಮಾಡಲಾಗುವುದು.

ಮೈಸೂರು ಅಥವಾ ಹಾಸನಕ್ಕೆ ಮತ್ತೊಂದು ಐಐಟಿ ಮಂಜೂರು ಪ್ರಸ್ತಾವನೆ ಸಲ್ಲಿಕೆ ಮಾಡಿದ್ದು, ಇದು ಈಡೇರಿಸಬೇಕಿದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಏರ್ ಕಾರ್ಗೋ ಕಾಂಪ್ಲೆಕ್ಸ್ ಆಗಿ ಪರಿಗಣಿಸಲು ಸಿವಿಲ್ ಏವಿಯೇಷನ್ ಸಚಿವಾಲಯಕ್ಕೆ ಜೂನ್ 5ರಂದು ಪ್ರಸ್ತಾವನೆ ಕಳುಹಿಸಲಾಗಿದೆ. ಇದರಿಂದ ರಾಜ್ಯದಲ್ಲಿ ಹೆಚ್ಚು ರಫ್ತು ಮತ್ತು ಆರ್ಥಿಕ ಬೆಳವಣಿಗೆ ಸುಧಾರಿಸಲಿದೆ. ಈ ಪ್ರಸ್ತಾವನೆಗೆ ಅನುಮೋದನೆ ದೊರಕಿಸಿಕೊಡುವುದು.

ಪಶ್ಚಿಮಘಟ್ಟಗಳ ಜನರ ರಕ್ಷಣೆಗೆ ಕಸ್ತೂರಿ ರಂಗನ್ ವರದಿ ತಿರಸ್ಕರಿಸುವಂತೆ ನಿರ್ಧರಿಸಿ ಪ್ರಸ್ತಾವನೆ ಕಳಿಸಲಾಗಿದೆ. ರಾಜ್ಯ ಸರ್ಕಾರದ ಪ್ರಸ್ತಾವನೆ ಅಂಗೀಕರಿಸಿ ಸೂಕ್ತ ತೀರ್ಮಾನ ಹೊರಡಿಸಬೇಕು ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಉತ್ತರದ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯವು ರೈಲ್ವೆ ನೆಟ್‌ವರ್ಕ್‌ನಲ್ಲಿ ಬಹಳ ಹಿಂದುಳಿದಿದೆ, ಆದ್ದರಿಂದ ರಾಜ್ಯದ ರೈಲ್ವೆ ಯೋಜನೆಗಳಿಗೆ ಆದ್ಯತೆ ನೀಡಬೇಕು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲವು ಅಗತ್ಯ ಶಾಲಾ ಕಟ್ಟಡ, ತರಗತಿ ಕೊಠಡಿ, ಗ್ರಂಥಾಲಯ ಸೇರಿದಂತೆ ಇತರೆ ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಗೆ ಉಪಯೋಗಿಸಲು ಹಲವು ಪ್ರಸ್ತಾವನೆಗಳನ್ನು ನೀಡಲಾಗಿದೆ.

ಗ್ರಾಮ ಮಟ್ಟದಲ್ಲಿ ಹೆಚ್ಚು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗೆ ಕೇಂದ್ರದ ಭೂ ಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಸಚಿವಾಲಯವನ್ನು ಕೋರಲಾಗಿದೆ.

ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವಾಲಯದಿಂದ ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯಡಿ ಒಟ್ಟು 584 ಕೋಟಿ ರೂ. ಅನುದಾನ ಬಿಡುಗಡೆಯಾಗಬೇಕಿದೆ ಹಾಗೂ ರಾಜ್ಯ ಸರ್ಕಾರಕ್ಕೆ 2.17 ಲಕ್ಷ ಮೆಟ್ರಿಕ್ ಟನ್ ಆಹಾರಧಾನ್ಯ ಲಭ್ಯವಿದ್ದು, ಪ್ರಸ್ತುತ 30,000 ಮೆಟ್ರಿಕ್ ಟನ್‌ಗಳನ್ನು ಹೆಚ್ಚುವರಿಯಾಗಿ ನೀಡುವಂತೆ ಕೋರಲಾಗುವುದು.

ಪ್ರಸ್ತುತ ರಚನೆಯಾಗಿರುವ 16ನೇ ಹಣಕಾಸು ಆಯೋಗವು ರಾಜ್ಯಕ್ಕೆ ಅನ್ಯಾಯವಾಗದಂತೆ ಗಮನ ಹರಿಸಲು ಮನವಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ಎಲ್ಲಾ ಬೇಡಿಕೆ, ಯೋಜನೆ, ಪ್ರಸ್ತಾವನೆಗಳ ಮಂಜೂರಾತಿಗೆ ಮನವಿ ಮಾಡುತ್ತೇನೆ, ಮನವಿಗಾಗಿ ಸೌಹಾರ್ದ ಸಭೆ ನಡೆಸುತ್ತಿದ್ದೇವೆ, ರಾಜ್ಯದ ಅಭಿವೃದ್ಧಿ ಒಂದೇ ನಮ್ಮ ಗುರಿ, ಇದರಲ್ಲಿ ರಾಜಕೀಯ, ಟೀಕೆ, ಭಾವನಾತ್ಮಕ ಆರೋಪಗಳ ಅಗತ್ಯವಿಲ್ಲ. ರಾಜ್ಯದ ಅಭಿವೃದ್ಧಿಗೆ ಸೌಹಾರ್ದಯುತವಾಗಿ ಪ್ರಯತ್ನಿಸೋಣ ಎಂದರು.

ಮುಂದಿನ ದಿನಗಳಲ್ಲಿ ಸಂಸತ್‌ನ ಒಳಗೆ ಹಾಗೂ ಹೊರಗೆ ರಾಜ್ಯದ ಸಂಸದರು ಇನ್ನಷ್ಟು ಪರಿಣಾಮಕಾರಿಯಾಗಿ ದನಿ ಎತ್ತಿ ರಾಜ್ಯದ ಹಿತ ಕಾಪಾಡುವರು ಎಂಬ ಆಶಾಭಾವನೆಯೊಂದಿಗೆ ಎಲ್ಲ ವಿಷಯಗಳನ್ನು ಅವರ ಗಮನಕ್ಕೆ ತಂದಿದ್ದೇನೆ, ರಾಜ್ಯದ ಬೇಡಿಕೆಗಳು ಈಡೇರುವ ವಿಶ್ವಾಸ ಹೊಂದಿದ್ದೇನೆ ಎಂದರು.

# ಯಡಿಯೂರಪ್ಪ ಬಂಧನಕ್ಕೆ ನೀಡಿದ್ದ ತಡೆಯಾಜ್ಞೆ ವಿಸ್ತರಣೆ

(1ನೇ ಪುಟದಿಂದ) ದಾಖಲಿಸಲು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರ ಪೀಠ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದೆ.

ಆಕ್ಷೇಪ ದಾಖಲಿಸಲು ಸಮಯ ಬೇಕಿದೆ ಎಂದು ಹೇಳಿರುವ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್, ಈಗಾಗಲೇ ಆರೋಪ ಪಟ್ಟಿ ದಾಖಲಿಸಿರುವುದರಿಂದ ಯಡಿಯೂರಪ್ಪ ಅರ್ಜಿ ಉಳಿಯದು ಎಂದಿದ್ದಾರೆ. ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿರುವ ಹೈಕೋರ್ಟ್, ಅಲ್ಲಿಯವರೆಗೆ ಯಡಿಯೂರಪ್ಪ ಬಂಧಿಸದಂತೆ ಆದೇಶಿಸಿದೆ. ಈ ವರ್ಷ ಫೆಬ್ರವರಿ 2ರ ಬೆಳಿಗ್ಗೆ 11.15ರ ಸಮಯದಲ್ಲಿ 17 ವರ್ಷದ ಅಪ್ರಾಪ್ತೆ ತನ್ನ ತಾಯಿಯ ಜೊತೆ ಯಡಿಯೂರಪ್ಪ ಅವರ ಡಾಲೋರ್ ಕಾಲೊನಿ ನಿವಾಸಕ್ಕೆ ತೆರಳಿದ್ದರು. ಈ ಹಿಂದೆ ಅಪ್ರಾಪ್ತೆ ದಾಖಲಿಸಿದ್ದ ಲೈಂಗಿಕ ಪೀಡನೆ ಪ್ರಕರಣಕ್ಕೆ ಸಂಬಂಧಿಸಿದಂತೆ ನೆರವು ಕೋರಿದ್ದರು ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.

ಈ ಸಂದರ್ಭದಲ್ಲಿ ಯಡಿಯೂರಪ್ಪ ಅಪ್ಪಾಪ್ತೆಯ ಮೇಲೆ ಲೈಂಗಿಕ ಹಲ್ಲೆ ನಡೆಸಲು ಯತ್ನಿಸಿದ್ದಾರೆ. ಅಪ್ರಾಪ್ತೆ ವಿರೋಧಿಸಿದ ನಂತರ ಹಣ ನೀಡಿ ಸುಮ್ಮನಿರುವಂತೆ ತಿಳಿಸಿದ್ದಾರೆ ಎಂದು ಆರೋಪ ಪಟ್ಟಿಯಲ್ಲಿ ಹೇಳಲಾಗಿದೆ.

ಅಪ್ರಾಪ್ತೆಯ ತಾಯಿ ಘಟನೆಯ ವಿಡಿಯೋ ಒಂದನ್ನು ಫೆಬ್ರವರಿ 20ರಂದು ಫೇಸ್‌ಬುಕ್‌ನಲ್ಲಿ ಹಾಕಿದ್ದರು. ಯಡಿಯೂರಪ್ಪ ಪರವಾಗಿ ಅರುಣ್, ರುದ್ರೇಶ್ ಹಾಗೂ ಮರಿಸ್ವಾಮಿ ಅವರು ತಾಯಿಯ ನಿವಾಸಕ್ಕೆ ತೆರಳಿದ್ದರು. ಫೇಸ್‌ಬುಕ್ ಖಾತೆ ಹಾಗೂ ತಾಯಿಯ ಐಫೋನ್ ಗ್ಯಾಲರಿಯಿಂದ ವಿಡಿಯೋ ಡಿಲೀಟ್ ಮಾಡಿಸಿದ್ದರು. ಇದಕ್ಕಾಗಿ 2 ಲಕ್ಷ ರೂ. ನೀಡಿದ್ದರು ಎಂದು ಆರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ.

## ಯಲವಟ್ಟಿ : ಇಂದು ಜನಸ್ಪಂದನ ಸಭೆ

ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದ ಶ್ರೀಗುರು ಸಿದ್ಧಾಶ್ರಮದ ಆವರಣದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಹರಿಹರ ತಾ. ಮಟ್ಟದ ಜನಸ್ಪಂದನ ಕಾರ್ಯಕ್ರಮವನ್ನು ಶಾಸಕ ಬಿ.ಪಿ.ಹರೀಶ್ ಅವರ ಅಧ್ಯಕ್ಷತೆಯಲ್ಲಿ ಮತ್ತು ತಹಶೀಲ್ದಾರ್ ಗುರುಬಸವರಾಜ್ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಉಪತಹಶೀಲ್ದಾರ್ ಆರ್. ರವಿ ತಿಳಿಸಿದ್ದಾರೆ.

# ಸಂಭ್ರಮದ ಅಜ್ಜಿ ಹಬ್ಬ ಆಚರಣೆ

ಹರಪನಹಳ್ಳಿ, ಜೂ.28- ಗ್ರಾಮದಲ್ಲಿ ಮಕ್ಕಳಿಗೆ, ಜನ, ಜಾನುವಾರುಗಳಿಗೆ ರೋಗರುಜಿನಗಳು ಬಾರದಿರಲಿ ಹಾಗೂ ಉತ್ತಮ ಮಳೆ, ಬೆಳೆಯಾಗಲಿ ಎಂದು ಪ್ರಾರ್ಥಿಸಿ, ಪಟ್ಟಣದ ವಾಲ್ಮೀಕಿ ನಗರದಲ್ಲಿ ಶುಕ್ರವಾರ ಅಜ್ಜಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.



ಹರಪನಹಳ್ಳಿ

ಅಜ್ಜಿ ಹಬ್ಬದ ಮತ್ತೊಂದು ವಿಶೇಷ ಎಡೆ ಇಡುವುದು. ಒಂದು ಮೊರದಲ್ಲಿ ಕುಡಿಕೆ, ಬೇವಿನ ಸೊಪ್ಪು, ದೇವಿಗೆ ಇಷ್ಟವಾದ ಹೋಳಿಗೆ, ಹಣ್ಣು, ಕಾಯಿ ಇಟ್ಟು ಪೂಜೆ ಮಾಡಲಾಗುತ್ತದೆ. ನಂತರ ಕುಟುಂಬಕ್ಕೆ ಯಾವುದೇ ರೋಗ ರುಜಿನಗಳು ತಗುಲದೇ ಇರಲಿ ಎಂದು ಅಜ್ಜಿಯನ್ನು (ಅಮ್ಮನನ್ನು) ಬೇಡಿಕೊಂಡು ಪೂಜಿಸಲಾಗುತ್ತದೆ.

ಅಜ್ಜಿ ಹಬ್ಬ ಅಂದರೆ ಸಣ್ಣ ಮಕ್ಕಳ ಮೈಮೇಲೆ ಗುಳ್ಳೆಗಳು ಆಗುವುದು, ಜ್ವರ ಬರುವುದು ಅಥವಾ ಅಮ್ಮ ಬಂದಿದ್ದರೆ ಅವುಗಳನ್ನು ದೂರ ಮಾಡಲು ಮಾಡುವ ಆಚರಣೆಯಾಗಿದೆ.

ಮೈಮೇಲೆ ಗುಳ್ಳೆಗಳಾದರೆ ಆಸ್ಪತ್ರೆಗೂ ತೋರಿಸುತ್ತಾರೆ. ಆದರೆ ಇದಕ್ಕೆ ಅದರದ್ದೇ ಆದ ಕೆಲ ಧಾರ್ಮಿಕ ಆಚರಣೆಗಳು ಸಹ ಇವೆ. ಅವುಗಳನ್ನು ಕೂಡ ಮಾಡಬೇಕು. ಇಂತಹ ಕಾಯಿಲೆಗಳು ಸಣ್ಣ ಮಕ್ಕಳಿಗೆ ಬಾರದೇ ಇರಲಿ, ದೇವಿ ಇದನ್ನು ತಪ್ಪಿಸಲಿ ಎಂದು ಈ ಅಜ್ಜಿ ಹಬ್ಬವನ್ನು ಆಚರಿಸಲಾಗುತ್ತದೆ ಎಂದು ಗ್ರಾಮಸ್ಥ ಮಂಡಕ್ಕಿ ಸುರೇಶ್ ಹೇಳುತ್ತಾರೆ.

ಸಂಜೆ ಊರಿನ ಗ್ರಾಮಸ್ಥರು ವಿವಿಧ ವಾದ್ಯಗಳೊಂದಿಗೆ ಅಜ್ಜಿ ಅಮ್ಮನ ಮೂರ್ತಿಯನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾ ಪಟ್ಟಣದಿಂದ ಐದು ಕಿ.ಮೀ. ದೂರ ಹೋಗಿ ಅಜ್ಜಿ ಅಮ್ಮನ ಮೊರಗಳನ್ನು ಊರಿನಾಚೆ ಇಟ್ಟು ಪೂಜೆ ಸಲ್ಲಿಸಿ ಬರುತ್ತಾರೆ.

ಅಜ್ಜಿ ಹಬ್ಬದ ಆಚರಣೆ ಹಿನ್ನೆಲೆಯಲ್ಲಿ ವಾರದ ಹಿಂದೆಯೇ ಗ್ರಾಮದಲ್ಲಿ ಡಂಗುರ ಸಾರಿಸಿ ಹಬ್ಬ ಆಚರಿಸುವಂತೆ ತಿಳಿಸಲಾಗುತ್ತದೆ. ಎಲ್ಲ ಮನೆಗಳಲ್ಲೂ ಹೋಳಿಗೆ ತಯಾರಿಸಿ, ಅಮ್ಮನವರ ಪ್ರತೀಕವಾಗಿ ಕೇಲನ್ನು ಸಿಂಗರಿಸುತ್ತಾರೆ.

ಹಾಲಸ್ವಾಮಿ ಮಠದ ವೃತ್ತದಲ್ಲಿ ಅಮ್ಮನ ಕಟ್ಟೆಗೆ ಸಂಜೆ ಗ್ರಾಮದ ಮಹಿಳೆಯರು, ಪುರುಷರು, ಮಕ್ಕಳೊಂದಿಗೆ ಬಂದು ಪೂಜೆ ಸಲ್ಲಿಸಿ, ಅಮ್ಮನವರನ್ನು ಬೀಳ್ಕೊಟ್ಟು ಹೋಗುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಮುಖಂಡರುಗಳಾದ ಆಲೂರು ಚೌಡಪ್ಪ, ರಾಯದುರ್ಗದ ದುರುಗಪ್ಪ, ಕೆ. ಅಂಜಿನಪ್ಪ, ಹೊರಕೇರಿ ರಮೇಶ್, ಗಾಟಿನ ಪರಸಪ್ಪ, ಚಿನ್ನುಗಿ ನಾಗಪ್ಪ, ಎಲ್ಲಜ್ಜಿ ಅಂಜಿನಪ್ಪ, ನಿಟ್ಟೂರು ದೊಡ್ಡ ಹಾಲಪ್ಪ, ದ್ಯಾಮಜ್ಜಿ ಹನುಮಂತ, ತಳವಾರ ವೆಂಕಟೇಶ, ಹೊರಕೇರಿ ರಮೇಶ್, ಬಿ. ವಿರೂಪಾಕ್ಷಪ್ಪ, ಪಟ್ನಾಮದ ದುರುಗಪ್ಪ, ಪಟ್ನಾಮದ ಪರಶುರಾಮ, ತಿಮ್ಮಣ್ಣ, ಕಮ್ಮಾರ ದೊಡ್ಡ ಹಾಲಪ್ಪ, ನಿಟ್ಟೂರು ತಿಮ್ಮಣ್ಣ, ಗಿಡ್ಡಳ್ಳಿ ನಿಂಗಪ್ಪ ಸೇರಿದಂತೆ ಇತರರು ಇದ್ದರು.

# ಸಿಎಂ ಸ್ಥಾನಕ್ಕೆ ಲಿಂಗಾಯತರನ್ನು ಪರಿಗಣಿಸಿ

(1ನೇ ಪುಟದಿಂದ) ಈಗಾಗಲೇ ಸಚಿವ ಸಂಪುಟದಲ್ಲಿ ಇದ್ದಾರೆ. ಎಂ.ಬಿ ಪಾಟೀಲ್, ಈಶ್ವರ್ ಖಂಡ್ರೆ, ಎಸ್. ಎಸ್. ಮಲ್ಲಿಕಾರ್ಜುನ್, ಸಮಾಜದ ಹಿರಿಯರಾದ ಶಾಮನೂರು ಶಿವಶಂಕರಪ್ಪ ಇಂತಹವರಿಗೆ ಅವಕಾಶ ನೀಡಬೇಕು. ವೀರಶೈವ ಲಿಂಗಾಯತ ಸಚಿವರಿಗೆ ಹೆಚ್ಚಿನ ಸ್ಥಾನ ಮಾನ ಕೊಡಬೇಕು. ಹಿರಿಯರಿಗೆ ಹೆಚ್ಚಿನ ಜವಾಬ್ದಾರಿ ನೀಡಿದರೆ ಸಮುದಾಯಕ್ಕೆ ನ್ಯಾಯ ಒದಗಿಸಿ ಕೊಟ್ಟಂತಾಗುತ್ತದೆ ಎಂದು ಶ್ರೀಗಳು ಹೇಳಿದರು.

ಯಾವುದೇ ಪಕ್ಷದಲ್ಲಿ ವೀರಶೈವ ಲಿಂಗಾಯತ ಸಮುದಾಯವನ್ನು ಕಡೆಗಣಿಸಿದರೆ ಒಳ್ಳೆಯ ಬೆಳವಣಿಗೆ ಆಗುವುದಿಲ್ಲ. ಈ ಹಿಂದೆ ಕೂಡ ಅದರ ಪರಿಣಾಮವನ್ನು ಅನುಭವಿಸಿದ್ದಾರೆ ಎಂದು ತಿಳಿಸಿದರು.

# ಸೊರೇನ್‌ಗೆ ಜಾಮೀನು

(1ನೇ ಪುಟದಿಂದ) ಜಾಮೀನಿನ ಮೇಲಿರುವಾಗ ಅಪರಾಧ ಮಾಡುವ ಸಾಧ್ಯತೆ ಇಲ್ಲ ಎಂದು ನ್ಯಾಯಾಲಯ ನಿಲುವು ತಳೆದಿದೆ ಎಂದು ಸೊರೇನ್ ಪರ ವಕೀಲ ಅರುಣಭ್ ಚೌಧರಿ ಹೇಳಿದ್ದಾರೆ.

ಬಿಡುಗಡೆ ನಂತರ ಹೇಳಿಕೆ ನೀಡಿರುವ ಹೇಮಂತ್ ಸೊರೇನ್, ಅಕ್ರಮ ಹಣ ಪ್ರಕರಣದಲ್ಲಿ ತಮ್ಮನ್ನು ತಪ್ಪಾಗಿ ಸಿಲುಕಿಸಲಾಗಿತ್ತು. ಇದರಿಂದಾಗಿ ಐದು ತಿಂಗಳ ಕಾಲ ಜೈಲಿನಲ್ಲಿ ಕಳೆಯುವಂತಾಯಿತು ಎಂದರು. ಬಿಜೆಪಿಯು ರಾಜಕೀಯ ನಾಯಕರು, ಸಾಮಾಜಿಕ ಕಾರ್ಯಕರ್ತರು ಹಾಗೂ ಪತ್ರಕರ್ತರ ದನಿಯನ್ನು ಧಮನಿಸುತ್ತಿದೆ ಎಂದವರು ಆರೋಪಿಸಿದರು.

ನನ್ನ ವಿರುದ್ಧ ಸಂಚು ನಡೆಸಿ ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಯಿತು. ನಾನು ನ್ಯಾಯಾಂಗವನ್ನು ಗೌರವಿಸುತ್ತೇನೆ. ನ್ಯಾಯಾಲಯ ತನ್ನ ಆದೇಶ ನೀಡಿದ್ದು, ನಾನು ಜಾಮೀನನ ಮೇಲೆ ಹೊರ ಬಂದಿದ್ದೇನೆ. ಆದರೆ, ನ್ಯಾಯಿಕ ಪ್ರಕ್ರಿಯೆ ದೀರ್ಘವಾಗಿದೆ ಎಂದರು.


## ನಿಸಾರ್ ಅಹಮ್ಮದ್ ನಿಧನ



ದಾವಣಗೆರೆಯ ಲಾಯರ್ ರೋಡ್ ವಾಸಿ
ನಿಸಾರ್ ಅಹಮ್ಮದ್
ಅವರು ದಿನಾಂಕ 28.6.2024ರ ಶುಕ್ರವಾರ ಮಧ್ಯಾಹ್ನ 2.30 ಗಂಟೆಗೆ ನಿಧನರಾದರು. ಮೃತರಿಗೆ 82 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.
ಮೃತರ ಪಾರ್ಥೀವ ಶರೀರವನ್ನು ಅಂತಿಮ ದರ್ಶನಕ್ಕೆ ರಂಗನಾಥ ಬಡಾವಣೆಯ 17ನೇ ಕ್ರಾಸ್, 6ನೇ ಮೇನ್‌ನ ಮೃತರ ಸ್ವಗೃಹದಲ್ಲಿ ಇಡಲಾಗುವುದು.
ಇವರ ಅಂತ್ಯಕ್ರಿಯೆಯನ್ನು ದಿನಾಂಕ 29.6.2024ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಪಿ.ಬಿ. ರಸ್ತೆಯ ಹಳೇ ಖಬರ್‌ಸ್ತಾನದಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ : 90369 32031



॥ ಶ್ರೀ ಆವರಗೊಳ್ಳ ವೀರಭದ್ರೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ವಾಸಿ ಪಿ.ಬಿ. ರೋಡ್, ಶಂಕರ್ ವಿಹಾರ ಬಡಾವಣೆ, BSNL ಆಫೀಸ್ ಹಿಂಭಾಗ ವಾಸಿ
ಶ್ರೀಮತಿ ಗುಡ್ಡದಹಳ್ಳಿ ಪ್ರೇಮಕ್ಕ ಶ್ರೀ ದಿ॥ ವೀರಪ್ಪ ಜಿ. ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 21.06.2024ನೇ ಶುಕ್ರವಾರ ಬೆಳಿಗ್ಗೆ 9.36ಕ್ಕೆ ನಮ್ಮ ಮಗನಾದ
ಶ್ರೀ ಜಿ.ವಿ. ಗಂಗಾಧರ್ ಗುಡ್ಡದಹಳ್ಳಿ
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ "ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 29.06.2024ನೇ ಶನಿವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ ಸಿಟಿ ಶಂಕರ್ ವಿಹಾರ ಬಡಾವಣೆ, ಎ ಬ್ಲಾಕ್, 1ನೇ ಮೇನ್, 3ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು : ಶ್ರೀಮತಿ ಗುಡ್ಡದಹಳ್ಳಿ ಪ್ರೇಮಕ್ಕ ಶ್ರೀ ದಿ॥ ವೀರಪ್ಪ ಜಿ. ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಗುಡ್ಡದಹಳ್ಳಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಫೋ. : 63636 73977
ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



## ಶ್ರೀಮತಿ ಹೆಚ್.ಎಸ್. ಮಂಜುಳ ನಿಧನ



ಚನ್ನಗಿರಿ ತಾಲ್ಲೂಕು ಸೋಮಶೆಟ್ಟಿಹಳ್ಳಿ ಸಿದ್ದಾಪುರ ಗ್ರಾಮದ ವಾಸಿ
ಶ್ರೀಮತಿ ಹೆಚ್.ಎಸ್. ಮಂಜುಳ
(59) ಅವರು ದಿನಾಂಕ 28-06-2024ರ ಶುಕ್ರವಾರ ರಾತ್ರಿ 10.15 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಪತಿ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29-06-2024ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಸೋಮಶೆಟ್ಟಿಹಳ್ಳಿ ಸಿದ್ದಾಪುರ ಗ್ರಾಮದಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು
ಪತಿ : ಜಿ.ಸಿ. ಹಾಲಸಿದ್ದಪ್ಪ, ನಿವೃತ್ತ ಮುಖ್ಯೋಪಾಧ್ಯಾಯರು
ಪುತ್ರಿ : ಜಿ.ಹೆಚ್. ಶೃತಿ ಮತ್ತು ಸಹೋದರರು
ಹಾಗೂ ಬಂಧುಗಳು ಮೊ. : 9449810342



## ಕೊಮಾರನಹಳ್ಳಿ ಗ್ರಾಮದ ಉದ್ದಣ್ಣರ ಆಕಾಶ್ ನಿಧನ



ಹರಿಹರ ತಾಲ್ಲೂಕು ಕೊಮಾರನಹಳ್ಳಿ ಗ್ರಾಮದ ಉದ್ದಣ್ಣರ ನಾಗಪ್ಪನವರ ಮಗ ಉದ್ದಣ್ಣರ ಆಕಾಶ್ (28) ಅವರು ದಿನಾಂಕ 28.6.2024ರ ಶುಕ್ರವಾರ ಮಧ್ಯಾಹ್ನ 1.45ಕ್ಕೆ ನಿಧನರಾದರು. ತಂದೆ-ತಾಯಿ, ಸಹೋದರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 29.6.2024ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಕೊಮಾರನಹಳ್ಳಿಯಲ್ಲಿ ನೆರವೇರಿಸಲಾಗುವುದು.


# ಹಾವೇರಿ ಬಳಿ ಅಪಘಾತ: 13 ಮಂದಿ ಸಾವು

ಹಾವೇರಿ, ಜು.28- ಸಮೀಪದ ಗುಂಡನಹಳ್ಳಿ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ಬೆಳಿಗ್ಗೆ 4 ಗಂಟೆ ಸುಮಾರಿನಲ್ಲಿ ನಡೆದ ಅಪಘಾತದಲ್ಲಿ 13 ಮಂದಿ ಮೃತಪಟ್ಟಿದ್ದಾರೆ.

ಗುಂಡನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ಪಕ್ಕದಲ್ಲಿ ಚಾಲಕ ಲಾರಿ ನಿಲ್ಲಿಸಿದ್ದ. ಇದೇ ಮಾರ್ಗವಾಗಿ ಶುಕ್ರವಾರ ನಸುಕಿನ 3.45 ಗಂಟೆ ಸುಮಾರಿಗೆ ಅತೀ ವೇಗದಲ್ಲಿ ಹೊರಟಿದ್ದ ಟಿ.ಟಿ, ಲಾರಿಗೆ ಡಿಕ್ಕಿಹೊಡೆದು ಈ ಅಪಘಾತ ಸಂಭವಿಸಿದೆ.

ಭದ್ರಾವತಿ ತಾಲ್ಲೂಕಿನ ಎಮ್ಮೆಹಟ್ಟಿ ಗ್ರಾಮದ ಪರಶುರಾಮ್ (45), ಭಾಗ್ಯ (40), ನಾಗೇಶ್ (50), ಇವರ ಪತ್ನಿ ವಿಶಾಲಾಕ್ಷಿ (40), ಸುಭದ್ರಬಾಯಿ (65), ಪುಣ್ಯ (50), ಮಂಜುಳಾಬಾಯಿ (62), ಇಬರ ಇಬ್ಬರು ಮಕ್ಕಳು, ಮಾನಸ (24), ರೂಪಾ (40), ಮಂಜುಳಾ (50), ಚಾಲಕ ಆದರ್ಶ್ (23) ಮೃತರು.

ಟಿ.ಟಿ.ಯಲ್ಲಿ ಸಿಲುಕಿದ್ದ ಅರ್ಪಿತಾ (19), ಅನ್ನಪೂರ್ಣಾ (40), ಮಗುವನ್ನು ರಕ್ಷಿಸಲಾಗಿದೆ. ಇವರಲ್ಲಿ ಇಬ್ಬರ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ

ಮೃತರು ಒಂದೇ ಕುಟುಂಬದವರು ಹಾಗೂ ಸಂಬಂಧಿಕರು. ಕಳೆದ ತಿಂಗಳು ಹೊಸ ಟೆಂಪೊ ಟ್ರಾವೆಲರ್ (ಟಿ.ಟಿ) ಖರೀದಿಸಿದ್ದರು. ಅದರ ಪೂಜೆಯನ್ನು ಸ್ಥಳೀಯವಾಗಿ ಮಾಡಿದ್ದರು. ಹೊಸ ಟಿ.ಟಿ ಆಗಿದ್ದರಿಂದ ದೇವರ ದರುಶನಕ್ಕೆ ಹೋಗಿ ಬರೋಣವೆಂದು ಇತ್ತೀಚಿಗೆ ಎಮ್ಮೆಹಟ್ಟಿ ಗ್ರಾಮದಿಂದ ಹೊರಟಿದ್ದರು.

ಬೆಳಗಾವಿ ಜಿಲ್ಲೆಯ ಚಿಂಚಲಿ ಮಾಯಮ್ಮ ದೇವಸ್ಥಾನಕ್ಕೆ ಹೋಗಿ ಅಲ್ಲಿಂದ ಸವದತ್ತಿ ಯಲ್ಲಮ್ಮ ದೇವಿ ದೇವಸ್ಥಾನಕ್ಕೆ ಬಂದಿದ್ದರು. ಅಲ್ಲಿ ದರುಶನ ಮುಗಿಸಿಕೊಂಡು ಧಾರವಾಡ-ಹಾವೇರಿ ಮಾರ್ಗವಾಗಿ ತಮ್ಮೂರಿಗೆ ಹೊರಟಿದ್ದರು ಎಂದು ಮೂಲಗಳು ತಿಳಿಸಿವೆ

ಅಪಘಾತ ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ 108 ವಾಹನದ ಸಿಬ್ಬಂದಿ, ಟಿಟಿ ವಾಹನದಲ್ಲಿ ಸಿಲುಕಿದ್ದ ಮೂವರನ್ನು ರಕ್ಷಣೆ ಮಾಡಿ ಅವರಿಗೆ ಚಿಕಿತ್ಸೆ ನೀಡಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ ಸೇರಿದಂತೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದ್ದಾರೆ. ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ ಮೃತರ ಮರಣೋತ್ತರ ಪರೀಕ್ಷೆ ನಡೆಯುತ್ತಿದೆ. ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು

# ಕಟ್ಟಡ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಆಗ್ರಹ




ದಾವಣಗೆರೆ, ಜೂ.28- ಕಟ್ಟಡ ಕಾರ್ಮಿಕರ ಹಕ್ಕೊತ್ತಾಯಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ಕಟ್ಟಡ ಕಾರ್ಮಿಕರ ಸಮನ್ವಯ ಸಮಿತಿಯಿಂದ ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು.

ಜಯದೇವ ವೃತ್ತದಲ್ಲಿ ಜಮಾಯಿಸಿದ ಸಮಿತಿಯ ಕಾರ್ಯಕರ್ತರು ಜಯದೇವ ವೃತ್ತದಿಂದ ಉಪ ವಿಭಾಗಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಎಸಿ ಮೂಲಕ ಮುಖ್ಯಮಂತ್ರಿ, ಕಾರ್ಮಿಕ ಮಂತ್ರಿ ಹಾಗೂ ಕಾರ್ಮಿಕ ಇಲಾಖೆಯ ಸಹಾಯಕ ಆಯುಕ್ತರಿಗೆ ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಿದರು.

ಈ ವೇಳೆ ಕಾರ್ಮಿಕ ಮುಖಂಡ ಆವರಗೆರೆ ಎಚ್.ಜಿ. ಉಮೇಶ್ ಮಾತನಾಡಿ, ಕಾರ್ಮಿಕರಿಗೆ ಅವಶ್ಯಕತೆಯಿಲ್ಲದ ಕಿಟ್ ನೀಡುವುದನ್ನು ತಕ್ಷಣದಲ್ಲೇ ನಿಲ್ಲಿಸಬೇಕು, ರಾಜ್ಯ ಹೈಕೋರ್ಟ್ ನೀಡಿರುವ ಕಿಟ್‌ಗಳ ವಿತರಣೆಯ ತಡೆಯಾಜ್ಞೆಯನ್ನು ಸರ್ಕಾರ ಚಾಚೂ ತಪ್ಪದೇ ಪಾಲಿಸಬೇಕೆಂದು ಆಗ್ರಹಿಸಿದರು.

ಕಾರ್ಮಿಕರ ಆರೋಗ್ಯ ತಪಾಸಣೆಯ ಹೆಸರಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಕೊಟ್ಟಿರುವ ಗುತ್ತಿಗೆ ರದ್ದುಪಡಿಸಿ ಕಟ್ಟಡ ಕಾರ್ಮಿಕರಿಗೆ ಬಿಬಿಎಂಪಿ ಮಾದರಿಯಲ್ಲಿ ಇಎಸ್ಐ ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಮೊದಲು ಇದ್ದ ಶೈಕ್ಷಣಿಕ ಧನ ಸಹಾಯ ಮುಂದುವರೆಸಬೇಕು. ಹೈಕೋರ್ಟ್ ಆದೇಶದಂತೆ ಬಾಕಿ ಇರುವ ಎಲ್ಲಾ ವಿದ್ಯಾರ್ಥಿಗಳಿಗೆ ಧನ ಸಹಾಯ ಬಿಡುಗಡೆ ಮಾಡಬೇಕು ಮತ್ತು ಶೈಕ್ಷಣಿಕ ಧನ ಸಹಾಯ ಅರ್ಜಿಯನ್ನು ಕಲ್ಯಾಣ ಮಂಡಳಿಯ ವೆಬ್ ಸೈಟ್ ನಲ್ಲಿಯೇ ಅರ್ಜಿ ಹಾಕುವಂತೆ ಕ್ರಮ ಕೈಗೊಳ್ಳಬೇಕೆಂದು ಹೇಳಿದರು.

ನಕಲಿ ಕಾರ್ಮಿಕರ ಹೆಸರಿನಲ್ಲಿ ನೈಜ ಕಾರ್ಮಿಕರ ಕಾರ್ಡ್‌ಗಳನ್ನು ತಿರಸ್ಕರಿಸುವುದನ್ನು ನಿಲ್ಲಿಸಿ ಬಾಕಿ ಇರುವ ಧನ ಸಹಾಯ ಅರ್ಜಿಗಳನ್ನು ಬೇಗನೇ ವಿಲೇವಾರಿ ಮಾಡಬೇಕೆಂದು ಮನವಿ ಮಾಡಿದರು.

ಸಿಐಟಿಯು ಮುಖಂಡ ಕೆ.ಎಚ್. ಆನಂದರಾಜ್ ಮಾತನಾಡಿ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯು ಏಕಪಕ್ಷೀಯ ತೀರ್ಮಾನ ಕೈ ಬಿಡಬೇಕು. ಕಾರ್ಮಿಕ ಸಂಘಟನೆಗಳ ಜೊತೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕಾರ್ಮಿಕರ ಸಮಸ್ಯೆ ಕುರಿತು ಚರ್ಚಿಸಿ ತ್ರಿಪಕ್ಷೀಯ ತೀರ್ಮಾನಕ್ಕೆ ಬರಬೇಕು ಎಂದರು.

ಕಾರ್ಮಿಕರಿಗೆ ಹೊರೆಯಾಗಿರುವ ದಿನನಿತ್ಯ ಬಳಕೆಯ ವಸ್ತುಗಳಾದ ಪೆಟ್ರೋಲ್, ಡೀಸೆಲ್, ಹಾಲಿನ ದರ ಹಾಗೂ ತರಕಾರಿಗಳ ಬೆಲೆ ಸೇರಿದಂತೆ ದಿನ ನಿತ್ಯ ಬಳಕೆಯ ವಸ್ತುವಿನ ದರ ಇಳಿಕೆ ಮಾಡಬೇಕೆಂದು ಆಗ್ರಹಿಸಿದರು.

ವಿ. ಲಕ್ಷ್ಮಣ, ಶಿವಕುಮಾರ್. ಡಿ. ಶೆಟ್ಟರ್, ಎಚ್.ಕೆ.ಆರ್ ಸುರೇಶ್, ಎಸ್.ಕೆ. ಆದಿಲ್ ಖಾನ್, ಮಹಮ್ಮದ್ ರಫೀಕ್, ನಾಗಮ್ಮ, ಸತೀಶ್ ಅರವಿಂದ್, ಲಕ್ಷ್ಮಣ್, ಭರಮಪ್ಪ, ಹನುಮಂತಪ್ಪ, ತಿಪ್ಪೇಶ್ ಹಾಗೂ ಇತರರಿದ್ದರು.

# ಸೊಳ್ಳೆ ಉತ್ಪತ್ತಿ ತಾಣಗಳಿಂದ ಸುತ್ತಮುತ್ತಲಿನ ಪರಿಸರ ಮುಕ್ತಗೊಳಿಸಿ

## ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಕರೆ

ದಾವಣಗೆರೆ, ಜೂ.28- ನಮ್ಮ ಸಣ್ಣ ನಿರ್ಲಕ್ಷ್ಯ ಕೂಡ ಡೆಂಘಿ ಜ್ವರದಿಂದ ನರಳುವಂತೆ ಮಾಡಬಹುದು. ಆದ್ದರಿಂದ ಮನೆಯ ಸುತ್ತಮುತ್ತಲಿನ ಪರಿಸರವನ್ನು ಸೊಳ್ಳೆ ಉತ್ಪತ್ತಿ ತಾಣಗಳಿಂದ ಮುಕ್ತಗೊಳಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್ ಕರೆ ನೀಡಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ರಾಮನಗರ ಎಸ್.ಓ.ಜಿ. ಕಾಲೋನಿಯಲ್ಲಿ 'ಡೆಂಘಿ ಜ್ವರ ನಿಯಂತ್ರಣ, ನಮ್ಮೆಲ್ಲರ ಜವಾಬ್ದಾರಿ' ವಾರಕ್ಕೆ ಒಂದು ದಿನ ಪ್ರತಿ ಶುಕ್ರವಾರ ಈಡಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶ ಮಾಡುವ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಾವು ಬಳಸಿ ಎಸೆಯುವ ಟೀ ಕಪ್, ಪ್ಲಾಸ್ಟಿಕ್ ಬಾಟಲ್, ಡಬ್ಬಗಳು, ನಿರುಪಯುಕ್ತ ವಸ್ತುಗಳಲ್ಲಿ ಮಳೆಗಾಲದಲ್ಲಿ ನೀರು ಸಂಗ್ರಹವಾಗುವುದರಿಂದ ಈಡಿಸ್ ಸೊಳ್ಳೆಯ ಲಾರ್ವಾಗಳು ಬೆಳೆಯುತ್ತವೆ. ಮನೆ, ಶಾಲಾ-ಕಾಲೇಜು, ಕಚೇರಿ, ಅಂಗನವಾಡಿ, ಅಂಗಡಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಹಗಲು ಹೊತ್ತಿನಲ್ಲಿ ಈಡಿಸ್ ಸೊಳ್ಳೆಗಳಿಂದ ರಕ್ಷಣೆ ಪಡೆಯಲು ಸ್ವಚ್ಛತೆಗೆ ಆದ್ಯತೆ ನೀಡೋಣ ಎಂದರು.

ಆರೋಗ್ಯ ಇಲಾಖೆಯ ಸಿಬ್ಬಂದಿ ಮನೆ-ಮನೆಗೆ ಭೇಟಿ ನೀಡಿ, ಡೆಂಘಿ ಜ್ವರದಿಂದ ರಕ್ಷಿಸಿಕೊಳ್ಳಲು ನೀಡುವ ಸಲಹೆ-ಸೂಚನೆಗಳನ್ನು ತಪ್ಪದೇ ಪಾಲಿಸಿ, ಸ್ವಯಂ ರಕ್ಷಣಾ ವಿಧಾನಗಳನ್ನು ಅನುಸರಿಸೋಣ. ಸಾರ್ವಜನಿಕರಿಗೆ ಈ ಎಲ್ಲಾ ವಿಷಯಗಳ ಬಗ್ಗೆ ತಿಳಿಸಬೇಕು ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಷಣ್ಮುಖಪ್ಪ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ಕೆ.ಹೆಚ್. ಗಂಗಾಧರ್ ಮತ್ತಿತರರು ಹಾಜರಿದ್ದರು.

# ಕೋಮು ದ್ವೇಷಕ್ಕಾಗಿ ಗೋವುಗಳ ಹತ್ಯೆ ; ಸಂಚು ನಡೆಸಿದವರ ಬಂಧನ

ಭೂಪಾಲ್, ಜೂ. 28 – 60ಕ್ಕೂ ಹೆಚ್ಚು ಗೋವು ಹಾಗೂ ದನಗಳನ್ನು ಕೊಂದ ಕಾರಣಕ್ಕಾಗಿ 24 ಜನರನ್ನು ಮಧ್ಯ ಪ್ರದೇಶದ ಪೊಲೀಸರು ಬಂಧಿಸಿದ್ದಾರೆ.

ಕೋಮು ದ್ವೇಷಕ್ಕೆ ಪ್ರಚೋದನೆ ನೀಡಲು ನಾಗಪುರದಲ್ಲಿ ಹತ್ಯೆಯ ಸಂಚು ನಡೆಸಲಾಗಿತ್ತು. ಇಲ್ಲಿನ ಎಂಟು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಯೋನಿಯಲ್ಲಿರುವ ಪಿಂಡರಾಯಿ ಹಳ್ಳಿಯ ಸಮೀಪ ಇರುವ ವೈನಗಂಗಾ ನದಿಯಲ್ಲಿ 18 ಹಸುಗಳನ್ನು ಕೊಂದು ಎಸೆಯಲಾಗಿದೆ. ಕಾರ್ಕತ್ಲ ಅರಣ್ಯ ಪ್ರದೇಶದ ಬಳಿ 28 ಹಸು ಹಾಗೂ ದನಗಳನ್ನು ಕೊಂದಿರುವುದು ಕಂಡು ಬಂದಿದೆ. ಜಿಲ್ಲೆಯ ಇತರೆಡೆಯೂ ಹಸುಗಳ ಕೊಂದಿರುವುದು ಕಂಡು ಬಂದಿದೆ.

ಪ್ರಕರಣದ ತನಿಖೆ ನಡೆಸಿದ ಪೊಲೀಸರು ವಹೀದ್ ಖಾನ್ ಹಾಗೂ ಆತನ ಆರು ಸಹಚರರನ್ನು ಬಂಧಿಸಿದ್ದಾರೆ. ನಾಗಪುರದ ಇಸ್ರಾರ್ ಅಹಮದ್ ಎಂಬಾತ ಹಣ ನೀಡಿದ ಕಾರಣಕ್ಕಾಗಿ ಗೋವುಗಳನ್ನು ಕೊಂದಿರುವುದಾಗಿ ವಹೀದ್ ಖಾನ್ ತಿಳಿಸಿದ್ದಾನೆ.

ಇಸ್ರಾರ್ ಹಾಗೂ ಆತನ ಸಹಚರರು ಜೂನ್ 17ರಂದು ಸಿಯೋನಿಗೆ ಬಂದಿದ್ದರು. ಅಲ್ಲಿ ಸನಾ ಉರ್ ರೆಹಮಾನ್, ಅಬ್ದುಲ್ ಕರೀಂ ಹಾಗೂ ರಫೀಕ್ ಖಾನ್‌ಗೆ ಹಸುಗಳನ್ನು ಕೊಲ್ಲಲು ಹಣ ನೀಡಿದರು. ಇಸ್ರಾರ್ ವಿಚಾರಣೆಯ ನಂತರ ಪೊಲೀಸರು ಬಂಧಿಸಿದ್ದಾರೆ.

ಸಿಯೋನಿಯು ಮಹಾರಾಷ್ಟ್ರದ ನಾಗಪುರದ ಗಡಿಗೆ ಹೊಂದಿಕೊಂಡಿದೆ. ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರ ಎರಡರಲ್ಲೂ ಗೋ ವಧೆ ನಿಷೇಧಿಸಲಾಗಿದೆ.

ಸಿಯೋನಿಯಲ್ಲಿ 19 ಹಸು ಹಾಗೂ 43 ದನ ಸೇರಿದಂತೆ ಒಟ್ಟಾರೆ 62 ರಾಸುಗಳನ್ನು ಕೊಲ್ಲಲಾಗಿದೆ ಎಂದು ಜಬಲ್ಪುರ ವಲಯದ ಐಜಿಪಿ ಅನಿಲ್ ಸಿಂಗು ಕುಶ್ವಾಹ ತಿಳಿಸಿದ್ದಾರೆ.

# ಬೀದಿಬದಿ ವ್ಯಾಪಾರಸ್ಥರಿಗೆ ಛತ್ರಿ ವಿತರಣೆ



ದಾವಣಗೆರೆ, ಜೂ.28- ಮಾತೃದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ ವತಿಯಿಂದ ನಗರದ ಬಾಪೂಜಿ ಆಸ್ಪತ್ರೆ ರಸ್ತೆಯಲ್ಲಿರುವ ಹಾಗೂ ಜಯದೇವ ಸರ್ಕಲ್ ಬಳಿಯ ಹೂವಿನ ಮಾರ್ಕೆಟ್‌ನಲ್ಲಿನ ಬೀದಿಬದಿ ವ್ಯಾಪಾರಸ್ಥರಿಗೆ ಸಿರಿಗನ್ನಡಂ ವಿಕಲಚೇತನ ಚಾರಿಟಬಲ್ ಟ್ರಸ್ಟಿನ ಅಧ್ಯಕ್ಷ ವೆಂಕಟೇಶ ಕಣ್ಣೋಳರ ಅಪೇಕ್ಷೆ ಮೇರೆಗೆ ಛತ್ರಿ ವಿತರಣೆ ಮಾಡಲಾಯಿತು.

ಛತ್ರಿ ಸ್ವೀಕರಿಸಿದ ಫಲಾನುಭವಿಗಳು, ಮಳೆಗಾಲದಲ್ಲಿ ಛತ್ರಿಯು ಬಹಳ ಉಪಯುಕ್ತವಾಗಿದೆ ನಿಮ್ಮ ಸೇವೆಗೆ ದೇವರ ಕೃಪೆ ಇರಲಿ ಎಂದು ಹರಸಿದರು.

ಎರಡೂ ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷರಾದ ಪೋತುಲ ಶ್ರೀನಿವಾಸ್ ಮತ್ತು ವೆಂಕಟೇಶ್ ಕಣ್ಣೋಳರ, ಸದಸ್ಯರಾದ ಕೆ.ವಿ.ರಾಘವೇಂದ್ರ, ಡಿ.ಜೆ. ಕೊಟ್ರೇಶ್, ರವಿತೇಜ. ಪ್ರಜ್ವಲ್, ವಿನಾಯಕ, ಹಾಲೇಶ್, ಕುಮಾರ್, ಬಸವರಾಜ್, ಹುಲ್ಮನೆ ಠಾಕೂರ್ ಮತ್ತು ಮಂಜುನಾಥ ಇದ್ದರು.

# ನಗರದಲ್ಲಿ ಇಂದು ತಾ.ಪಂ. ಸಾಮಾನ್ಯ ಸಭೆ

ತಾಲ್ಲೂಕು ಪಂಚಾಯ್ತಿ ಸಾಮಾನ್ಯ ಸಭೆಯು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಹಾಗೂ ತಾಲ್ಲೂಕು ಪಂಚಾಯತ್ ಆಡಳಿತಾಧಿಕಾರಿ ಎಲ್.ಎ. ಕೃಷ್ಣನಾಯ್ಕ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ತಾ.ಪಂ. ಸಭಾಂಗಣದಲ್ಲಿ ನಡೆಯಲಿದೆ.

# ಎಲ್ಲಾ ವಿಮಾನ ನಿಲ್ದಾಣಗಳ ಕಟ್ಟಡಗಳ ಪರಿಶೀಲನೆಗೆ ಆದೇಶ

ನವದೆಹಲಿ, ಜೂ. 28 – ದೇಶದ ಎಲ್ಲಾ ವಿಮಾನ ನಿಲ್ದಾಣಗಳ ಕಟ್ಟಡ ಸಾಮರ್ಥ್ಯವನ್ನು ಪರಿಶೀಲಿಸುವಂತೆ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ಆದೇಶಿಸಿದೆ. ದೆಹಲಿ ವಿಮಾನ ನಿಲ್ದಾಣದಲ್ಲಿ ತಾರಸಿ ಕುಸಿದ ಘಟನೆ ನಡೆದ ನಂತರ ಈ ಸೂಚನೆ ನೀಡಲಾಗಿದೆ. ದೆಹಲಿಯಲ್ಲಿ ಟರ್ಮಿನಲ್ 1 ತಾರಸಿ ಕುಸಿದು ಒಬ್ಬರು ಮೃತಪಟ್ಟಿದ್ದರು ಹಾಗೂ ಆರು ಜನ ಗಾಯಗೊಂಡಿದ್ದರು. ನಂತರ 100ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದುಗೊಳಿಸಲಾಗಿತ್ತು.

# ತೋಳಹುಣಸೆಯಲ್ಲಿ ಇಂದು ಡೆಂಗ್ಯೂ ಜಾಗೃತಿ ಕಾರ್ಯಕ್ರಮ

ದಾವಣಗೆರೆ ಸಮೀಪದ ತೋಳಹುಣಸೆ ಗ್ರಾಮದಲ್ಲಿ ದಾವಣಗೆರೆಯಲ್ಲಿ ಹೆಚ್ಚುತ್ತಿರುವ ಡೆಂಗ್ಯೂ ರೋಗದ ಬಗ್ಗೆ ಜನಜಾಗೃತಿ ಮೂಡಿಸಲು ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಿಶಾಸ್ತ್ರ ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಇಂದು ಬೆಳಿಗ್ಗೆ 11.30 ಕ್ಕೆ ಡೆಂಗ್ಯೂ ಜಾಗೃತಿ ಕಾರ್ಯಕ್ರಮ ಆಯೋಜಿಸಿದ್ದಾರೆ.

# ಕಡ್ಲೇಬಾಳು : ಇಂದಿನಿಂದ ಸದ್ಗುರುತ್ರಯರ ಮೂರ್ತಿ ಪ್ರತಿಷ್ಠಾಪನೆ

ದಾವಣಗೆರೆ ತಾಲ್ಲೂಕಿನ ಕಡ್ಲೇಬಾಳು ಗ್ರಾಮದ ಶ್ರೀ ಸದ್ಗುರು ಕೃಪಾ ಭವನ (ದೇವರಹಟ್ಟಿ)ದಲ್ಲಿ ಇಂದಿನಿಂದ ಜುಲೈ 1ರ ವರೆಗೆ ಮೂರು ದಿನಗಳ ಕಾಲ 'ಸದ್ಗುರುತ್ರಯರ ಮೂರ್ತಿ ಪ್ರತಿಷ್ಠಾಪನೆ' ಹಾಗೂ 'ಶ್ರೀ ಮಹಾ ರಾಜರ ದಿವ್ಯ ಸ್ಥಿರ ಪಾದುಕೆಗಳ ಪ್ರತಿಷ್ಠಾಪನಾ' ಕಾರ್ಯಕ್ರಮದ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಇಂದು ಬೆಳಿಗ್ಗೆ 11ಕ್ಕೆ ಹೆಬ್ಬಳ್ಳಿಯಿಂದ ಶ್ರೀ ಮಹಾರಾಜರ ಪಾದುಕೆಗಳೊಂದಿಗೆ ಶ್ರೀ ದತ್ತಾವದೂತ ಗುರುಗಳ ಸ್ವಾಗತ, ಮಹಾ ಮಂಗಳಾರತಿ ಮತ್ತು ಮಹಾ ಪ್ರಸಾದ ನಡೆಯಲಿದೆ.

ಸಂಜೆ 4ಕ್ಕೆ ನಾಗಸುಬ್ರಹ್ಮಣ್ಯ ಮಂದಿರದಿಂದ ಸದ್ಗುರು ಕೃಪಾಭವನದವರೆಗೆ ಶೋಭಾಯಾತ್ರೆ, 7ಕ್ಕೆ ಪ್ರತಿಷ್ಠಾಪನಾಂಗ ಹವನ ಹಾಗೂ ದಿವ್ಯ ಸ್ಥಿರ ಪಾದುಕೆಗಳ ಮೂರು ವಿಗ್ರಹಗಳ ಜಲಾಧಿವಾಸ, ಧಾನ್ಯಾಧಿವಾಸ ಹಾಗೂ ಶಯ್ಯಾಧಿವಾಸ ನಡೆಯಲಿವೆ.

ನಾಳೆ ದಿನಾಂಕ 30ರ ಬೆಳಗ್ಗೆ 6ರಿಂದ ಕಾಕಡಾರತಿ ಹಾಗೂ ಭಜನೆ, 7ರಿಂದ ಪುಣ್ಯಾಹ ವಾಚನ, ನಂತರ ಸದ್ಗುರುತ್ರಯರನ್ನು ಎಬ್ಬಿಸುವುದು.

10ಕ್ಕೆ ಮಹಾರಾಜರ ದಿವ್ಯ ಸ್ಥಿರ ಪಾದುಕೆಗಳ ಹಾಗೂ ಮೂರು ಸದ್ಗುರುತ್ರಯರ ವಿಗ್ರಹಗಳ ಪ್ರಾಣ ಪ್ರತಿಷ್ಠಾಪನೆ. ನಂತರ ಪೂರ್ಣಾಹುತಿ ಮತ್ತು ಪ್ರಸಾದ ಸೇವೆ.

ಸಂಜೆ 4ರಿಂದ 6ರ ವರೆಗೆ ಮಹಿಳಾ ಮಂಡಳಿಗಳಿಂದ ಭಜನೆ, 7ಕ್ಕೆ ಭರತನಾಟ್ಯ, ರಾತ್ರಿ 8ಕ್ಕೆ ದೀಪೋತ್ಸವ, ಮಹಾಮಂಗಳಾರತಿ, ಮಂತ್ರಪುಷ್ಪ, ಅಷ್ಟಾವಧಾನ ಸೇವೆ ಹಾಗೂ ಶ್ರೀ ಮಹಾರಾಜರ ಶೇಜಾರತಿ ನಡೆಯಲಿದೆ.

ನಾಡಿದ್ದು ದಿನಾಂಕ ಜು. 1ರ ಬೆಳಗ್ಗೆ 6ರಿಂದ ಭಜನೆ ಕಾರ್ಯಕ್ರಮ, 7.30ರಿಂದ ಮಧ್ಯಾಹ್ನ 12.30ರ ವರೆಗೆ ಹನುಮಾನ್ ಚಾಲೀಸಾ ಪಠಣ, ಮಧ್ಯಾಹ್ನ 12.30ರಿಂದ ಪ್ರವಚನ, 1.30ಕ್ಕೆ ಮಹಾ ಮಂಗಳಾರತಿ ಹಾಗೂ ಪ್ರಸಾದ ಸೇವೆ ನಡೆಯಲಿದೆ.

# ರಾಣೇಬೆನ್ನೂರಿನಲ್ಲಿ ನಾಳೆ ಆಹಾರ ಸಂಸ್ಕರಣಾ ಸಂಘಗಳ ನೋಂದಣಿ

ರಾಣೇಬೆನ್ನೂರು, ಜೂ.28- 100 ಮಹಿಳೆಯರಿಗೆ ಸ್ವಗ್ರಾಮದಲ್ಲಿಯೇ ಗೃಹ ಮತ್ತು ಸೂಕ್ಷ್ಮ ಕೈಗಾರಿಕೆಗಳಿಂದ ಉದ್ಯೋಗ ಸೃಷ್ಟಿಸುವ ಆಹಾರ ಸಂಸ್ಕರಣಾದಾರರ ಮಹಿಳಾ ಸಹಕಾರ ಸಂಘಗಳ ನೋಂದಣಿ ಪ್ರಮಾಣ ಪತ್ರಗಳನ್ನು ವಿತರಿಸುವ ಸಮಾರಂಭವು ನಾಡಿದ್ದು ದಿನಾಂಕ 30 ರ ಭಾನುವಾರ ನಗರದ ಎಪಿಎಂಸಿ ಸಮುದಾಯ ಭವನದಲ್ಲಿ ನಡೆಯಲಿದ್ದು, ಸಚಿವ ಶಿವಾನಂದ ಪಾಟೀಲ, ಶಾಸಕ ಪ್ರಕಾಶ ಕೋಳಿವಾಡ ಆಗಮಿಸುವರು ಎಂದು ಒಕ್ಕೂಟದ ಪ್ರವರ್ತಕಿ ರುಕ್ಮಿಣಿ ಸಾವುಕಾರ ತಿಳಿಸಿದರು. ಮನೆಯಲ್ಲಿ ಹಪ್ಪಳ, ಸಂಡಿಗೆ, ಇತರೆ ಖಾದ್ಯ ಪದಾರ್ಥಗಳು, 'ರೆಡಿ ಟೂ ಕುಕ್' ಪದಾರ್ಥಗಳ ಗೃಹ ಕೈಗಾರಿಕೆಗಳು ಕೃಷಿ ನಂತರ ಹೆಚ್ಚು ಉದ್ಯೋಗ ಸೃಷ್ಟಿಸುತ್ತವೆ. ತಾಲ್ಲೂಕಿನ 25 ಗ್ರಾಮಗಳಲ್ಲಿ ಈ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಶೇರು ಸಂಗ್ರಹಿಸಿ ಸಹಾಯಕ ನಿಬಂಧಕರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಅಂದು ಸಂಘಗಳ ಪ್ರಮಾಣ ಪತ್ರ ಕೊಡಲಾಗುವುದು ಎಂದು ರುಕ್ಮಿಣಿ ತಿಳಿಸಿದರು.



# ಮಾದಕ ವಸ್ತುಗಳಿಗೆ ಕಡಿವಾಣ, ಸ್ವಾಸ್ಥ್ಯ ಬದುಕಿಗೆ ಸೋಪಾನ

ಜಗತ್ತಿನಲ್ಲಿರುವ 84 ಕೋಟಿ ಜೀವರಾಶಿಗಳಲ್ಲಿ ಮಾನವ ಶ್ರೇಷ್ಠ ಪ್ರಾಣಿ. ಏಕೆಂದರೆ ಮಾತನಾಡುವ, ಆಲೋಚಿಸುವ, ಭಾವನೆಗಳನ್ನು ಅಭಿವ್ಯಕ್ತಿಸುವ ವಿಶೇಷವಾದ ಸಾಮರ್ಥ್ಯ ಅವನಿಗಿದೆ. ಈ ಶಕ್ತಿಯ ಮೂಲಕ ತುಂಬಾ ಶ್ರೇಷ್ಠನಾಗಬೇಕಾದ ಮಾನವ ನಗರೀಕರಣ, ಕೈಗಾರಿಕೀಕರಣ, ಪಾಶ್ಚಾತ್ಯೀಕರಣದ ಪ್ರಭಾವದಿಂದ ಪ್ರೇರಿತನಾಗಿ ಮೂಲ ಸಂಸ್ಕೃತಿಯನ್ನು ಮರೆತು ಮೃಗೀಯ ವರ್ತನೆಗೆ ದಾಸನಾಗಿದ್ದಾನೆ. ಪ್ರಸ್ತುತ ವೈಜ್ಞಾನಿಕವಾಗಿ, ತಾಂತ್ರಿಕವಾಗಿ ಎಷ್ಟೇ ಮುಂದುವರೆದಿದ್ದರೂ, 20ನೇ ಶತಮಾನದಿಂದೀಚೆಗೆ ಜಗತ್ತನ್ನೇ ತಲ್ಲಣಗೊಳಿಸುವ ಸಾಮಾಜಿಕ ಪಿಡುಗುಗಳಾದ ಬಡತನ, ಭಿಕ್ಷಾಟನೆ, ನಿರುದ್ಯೋಗ, ವರದಕ್ಷಿಣೆ, ಅಪರಾಧ, ಮಾದಕ ವಸ್ತು ವ್ಯಸನವು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿವೆ. ಈ ಸಮಸ್ಯೆಗಳನ್ನು ಪರಿಹರಿಸಬೇಕಾದ ಯುವಜನತೆ ಇಂತಹ ದುಶ್ಚಟಗಳ ಸೆಲೆಯಲ್ಲಿ ಸಿಕ್ಕು ತಮ್ಮ ಅಮೂಲ್ಯ ಬದುಕನ್ನು ಹಾಳು ಮಾಡಿಕೊಳ್ಳುತ್ತಿರುವುದು ಆತಂಕಕಾರಿ.

ಯುವಶಕ್ತಿಯೇ ದೇಶದ ಶಕ್ತಿಯಾಗಿದ್ದು, ಭವ್ಯ ಭಾರತ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕಾದ ಯುವಜನತೆ ಮಾದಕ ವಸ್ತುಗಳ ದುಶ್ಚಟಕ್ಕೆ ಒಳಗಾಗಿ ಮಾನವೀಯ ಮೌಲ್ಯಗಳನ್ನು ಕಳೆದುಕೊಂಡು, ಅಂಧಕಾರದಲ್ಲಿ ಜೀವನ ನಡೆಸುತ್ತಾ ಚಿಕ್ಕ ವಯಸ್ಸಿನಲ್ಲಿಯೇ ಮರಣ ಹೊಂದುತ್ತಿರುವುದು ಆಘಾತದ ವಿಷಯ.

ಜೋಸೆಫ್ ಜ್ಯೂಲಿಯನ್ ರವರ ಪ್ರಕಾರ ಮಾದಕ ವಸ್ತುಗಳೆಂದರೆ ಯಾವುದೇ ರಾಸಾಯನಿಕ ವಸ್ತುವಾಗಿದ್ದು ಅದರ ಸೇವನೆಯಿಂದ ದೈಹಿಕ ಕಾರ್ಯ, ಮನಸ್ಥಿತಿ, ಗ್ರಹಣ ಶಕ್ತಿಯ ಮೇಲೆ ಪರಿಣಾಮ ಬೀರುತ್ತದೆ. ಇದನ್ನು ಪದೇ ಪದೇ ಬಳಸುವುದರಿಂದ ವ್ಯಕ್ತಿ ಮಾದಕ ವಸ್ತು ವ್ಯಸನಿಯಾಗುತ್ತಾನೆ. ಮಾದಕ ವಸ್ತುವು ಮನಸ್ಸಿಗೆ ಗೊಂದಲವನ್ನು ತರುವ ಪದಾರ್ಥವಾಗಿದ್ದು ಅಮಲು ರೋಗವಾಗಿದೆ. ಭಾರತದ ನಗರ ಪ್ರದೇಶಗಳಲ್ಲಷ್ಟೇ ಅಲ್ಲದೆ ಹಳ್ಳಿ ಹಳ್ಳಿಗಳಲ್ಲಿಯೂ ಇದರ ಬಳಕೆ ಕಂಡುಬರುತ್ತದೆ. ಶ್ರೀಮಂತರು, ಮಧ್ಯಮ ವರ್ಗದವರು, ವಿದ್ಯಾವಂತರು, ಯುವಕರು, ಮಹಿಳೆಯರು ಎಂಬ ಭೇದವಿಲ್ಲದೆ ದುಶ್ಚಟಗಳಿಗೆ ಬಲಿಯಾಗಿ ತಮ್ಮ ಆರೋಗ್ಯವನ್ನು ಕಳೆದುಕೊಳ್ಳುತ್ತಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಯವರು ನಡೆಸಿದ ಸಮೀಕ್ಷೆಯ ಪ್ರಕಾರ ಭಾರತದ ವಿದ್ಯಾರ್ಥಿಗಳಲ್ಲಿ ಶೇ 10 ರಷ್ಟು ಒಂದಿಲ್ಲೊಂದು ದುಶ್ಚಟಕ್ಕೆ ಒಳಗಾಗಿದ್ದು ಅದರಲ್ಲಿ 14 ರಿಂದ 22 ರ ವಯೋಮಾನದವರು ಹೆಚ್ಚಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಶೇ 2 ರಷ್ಟಿದ್ದ ವ್ಯಸನಿಗಳು ಪ್ರಸ್ತುತ ಶೇ 30 ಕ್ಕಿಂತ ಹೆಚ್ಚಿದ್ದಾರೆ. ಜಗತ್ತಿನ ಸುಮಾರು 20 ಕೋಟಿಯಷ್ಟು ಇರುವ ಮಾದಕ ವ್ಯಸನಿಗಳಲ್ಲಿ ಭಾರತದಲ್ಲಿ ಶೇ 7.5 ಕೋಟಿ ವ್ಯಸನಿಗಳಿದ್ದಾರೆಂದು ಅಂದಾಜಿಸಲಾಗಿದೆ. ನಶೆಯ ಅಲೆ ಸಾವಿನ ಬಲೆಯಾಗುತ್ತಿದ್ದರೂ ಕೂಡ ಈ ದೇಶದಲ್ಲಿ ಊಟವಿಲ್ಲದೆ ಸಾಯುವವರ ಸಂಖ್ಯೆಗಿಂತಲೂ ಚಟವನ್ನು ಬೆಳೆಸಿಕೊಂಡು ಸಾಯುವವರು ಹೆಚ್ಚಾಗಿದ್ದಾರೆ.

ಮಾದಕ ವಸ್ತು ಬಳಸುವ ಆತಂಕದ ರಾಷ್ಟ್ರಗಳಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದೆ. ಅಮಲು ಪದಾರ್ಥಗಳಿಗೆ ಬಲಿಯಾಗುತ್ತಿರುವವರಲ್ಲಿ



(ಜೂನ್-26 ರಂದು ಅಂತರ ರಾಷ್ಟ್ರೀಯ ಮಾದಕ ವಸ್ತುಗಳ ದುರ್ಬಳಕೆ ವಿರೋಧಿ ದಿನ ತನ್ನಿಮಿತ್ತ ಈ ಲೇಖನ)

ವಿದ್ಯಾರ್ಥಿಗಳನ್ನೂ ಒಳಗೊಂಡಂತೆ ಯುವಜನತೆ ಹೆಚ್ಚಾಗಿದ್ದು, ಇದು ದೇಶದ ಭವಿಷ್ಯಕ್ಕೆ ಮಾರಕವಾಗಿದೆ.

**ದುಶ್ಚಟಗಳ ಆರಂಭಕ್ಕೆ ಕಾರಣಗಳು:**

* ಕ್ಷಣಕಾಲ ಸುಖ ಅನಂತಕಾಲ ದು:ಖಕ್ಕೆ ಕಾರಣ ಎನ್ನುವುದು ಗೊತ್ತಿದ್ದೂ ಅಫೀಮು, ಹೆರಾಯಿನ್, ಬೀಡಿ, ಸಿಗರೇಟು, ಮದ್ಯಪಾನ ಮುಂತಾದ ದುಶ್ಚಟಗಳಿಗೆ ವಿದ್ಯಾವಂತ ಯುವಕರೇ ಬಲಿಯಾಗುತ್ತಿದ್ದಾರೆ.
* ಉಲ್ಲಾಸಕ್ಕಾಗಿ, ಫ್ಯಾಷನ್‌ಗಾಗಿ, ದುರ್ಬಲ ಮನಸ್ಸು, ಏಕಾಂಗಿತನ, ಒತ್ತಡ ನಿವಾರಣೆ ಮಾಡಿಕೊಳ್ಳಲು
* ನೋವು, ದು:ಖಕ್ಕೆ ಪರಿಹಾರವೆಂಬ ಭ್ರಮೆಗೆ ಒಳಗಾಗಿ ತನಗೆ ಅರಿವಿಲ್ಲದಂತೆ ದೊಡ್ಡ ಕಂದಕಕ್ಕೆ ಬಿದ್ದು ನರಳಾಡುವಂತಹ ಸಂದರ್ಭ ತಂದುಕೊಂಡು ಮಾದಕ ವಸ್ತುಗಳ ಮಾಯಾ ಜಾಲಕ್ಕೆ ಒಳಗಾಗುತ್ತಿದ್ದಾರೆ. ತೇರಣಿಯ ಹುಳು ತಾನು ಸುತ್ತಿದ ಬಲೆಯಲ್ಲಿ ತಾನೇ ಬಿದ್ದು ಹೊರಳಾಡುವಂತೆ ಅವರ ಪರಿಸ್ಥಿತಿಯಾಗಿದೆ.

**ದುಶ್ಚಟಗಳಿಂದಾಗುವ ಪರಿಣಾಮಗಳು:**

* ದೇಹ ಮತ್ತು ಮನಸ್ಸಿನ ಸಮತೋಲನ ಕಳೆದುಕೊಳ್ಳುವುದು.
* ವ್ಯಕ್ತಿ ತನ್ನನ್ನು ದಹಿಸಿಕೊಳ್ಳುವುದರ ಜೊತೆಗೆ ಕುಟುಂಬದ ನೆಮ್ಮದಿಗೆ ಭಂಗ ತರುತ್ತಾನೆ.
* ಕುಟುಂಬ, ಸಮಾಜದಿಂದ ನಿಂದನೆಗೆ ಒಳಗಾಗುವನು.
* ಜ್ಞಾನೇಂದ್ರಿಯಗಳ ಮೇಲೆ ಹತೋಟಿ ಕಳೆದುಕೊಳ್ಳುವನು
* ಸಮಾಜ ಬಾಹಿರ ಚಟುವಟಿಕೆಗಳಾದ ಕಳ್ಳತನ, ಅತ್ಯಾಚಾರ, ಕೊಲೆ ಇಂತಹ ದುಷ್ಕೃತ್ಯಗಳನ್ನು ಮಾಡುವನು.
* ದಾಂಪತ್ಯದಲ್ಲಿ ವಿರಸವುಂಟಾಗಿ ವಿಚ್ಛೇದನಗಳಾಗುವ ಸಾಧ್ಯತೆ.
* ರಸ್ತೆ ಅಪಘಾತಗಳಲ್ಲಿ ಶೇ 1/3 ರಷ್ಟು ಮದ್ಯಪಾನ ಮತ್ತು ಮಾದಕ ವಸ್ತು ಸೇವನೆಯಿಂದಾಗುತ್ತದೆ. ಈ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧೀಜಿಯವರು ಬೆಂಕಿ ದೇಹವನ್ನು ನಾಶ ಮಾಡಿದರೆ ಕುಡಿತ ದೇಹ ಮತ್ತು ಆತ್ಮಗಳೆರಡನ್ನೂ ನಾಶ ಮಾಡುತ್ತದೆ ಎಂದಿದ್ದಾರೆ.

**ಪರಿಹಾರ ಕ್ರಮಗಳು:**

* ಮಾದಕ ವಸ್ತುಗಳ ಹಿಡಿತಕ್ಕೆ ಸಿಲುಕದೇ ಅದರಿಂದ ದೂರವಿರುವುದು.
* ಮಾದಕ ವಸ್ತು ಸೇವಿಸುವುದಿಲ್ಲವೆಂದು ಪ್ರತಿಜ್ಞೆ ಮಾಡುವುದು.
* ಸಹೋದ್ಯೋಗಿ, ಸ್ನೇಹಿತರಿಗೆ ತಿಳುವಳಿಕೆ ನೀಡುವುದು.
* 18 ವರ್ಷ ವಯಸ್ಸಿನವರೆಗೂ ಪೋಷಕರು ಮಕ್ಕಳ ಬಗ್ಗೆ ಗಮನ ನೀಡಿ ಮಾರ್ಗದರ್ಶನ ಮಾಡುವುದು.
* ಶಾಲೆ-ಕಾಲೇಜುಗಳಲ್ಲಿ ಶಿಕ್ಷಕರು ಮಕ್ಕಳಲ್ಲಿ ಜೀವನ ಕೌಶಲ್ಯಗಳನ್ನು ಬೆಳೆಸುವ ರಾಯಭಾರಿಗಳಾಗಿ ಕಾರ್ಯನಿರ್ವಹಿಸುವುದು.
* ವಿದ್ಯಾರ್ಥಿಗಳನ್ನು ಸಹಪಠ್ಯ ಚಟುವಟಿಕೆಗಳಲ್ಲಿ ತೊಡಗಿಸಿ ಆರೋಗ್ಯಕರವಾದ ಹವ್ಯಾಸಗಳನ್ನು ಬೆಳೆಸುವುದು.

ಭಾರತ ಸರ್ಕಾರವು 1951ರಲ್ಲಿ ಅಪಾಯಕಾರಿ ವಸ್ತುಗಳ ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾಯ್ದೆ ಮಾದಕ ವಸ್ತು ತಯಾರಿಕೆ, ಸಾಗಾಣಿಕೆ, ಮಾರಾಟ ಮತ್ತು ಬಳಕೆಯ ಮೇಲೆ ನಿರ್ಬಂಧ ಹೇರಿದೆ. 1985 ರಲ್ಲಿ ಡ್ರಗ್ಸ್ ಆಕ್ಟ್ ಜಾರಿಗೊಳಿಸಿದೆ. ಈ ಕಾಯ್ದೆ ಮಾದಕ ವಸ್ತುಗಳ ಕಳ್ಳ ವ್ಯಾಪಾರದಲ್ಲಿ ತೊಡಗಿದ ಅಪರಾಧಿಗಳಿಗೆ ಕನಿಷ್ಠ 10 ರಿಂದ 20 ವರ್ಷ ಕಠಿಣ ಶಿಕ್ಷೆ, 1 ರಿಂದ 2 ಲಕ್ಷದವರೆಗೆ ದಂಡ ಘೋಷಿಸಿದೆ.

ಡಿಸೆಂಬರ್-7, 1987 ರ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾದಕ ವಸ್ತುಗಳ ದುರ್ಬಳಕೆಯನ್ನು ತಡೆಗಟ್ಟುವ ನಿಯಮಾವಳಿಗಳ ಅಂಗೀಕಾರವನ್ನು ಹಲವಾರು ರಾಷ್ಟ್ರಗಳು ಒಪ್ಪಿಕೊಂಡು ವಿಶ್ವದಾದ್ಯಂತ ಮಾದಕ ವಸ್ತುಗಳ ದುರ್ಬಳಕೆ ನಿಯಂತ್ರಿಸುವ ತೀರ್ಮಾನವನ್ನು ಮಾಡಿದವು.

ಜೂನ್-26 ವಿಶ್ವಸಂಸ್ಥೆಯು ಮಾದಕ ವಸ್ತು ದುರ್ಬಳಕೆ ಮತ್ತು ಕಳ್ಳಸಾಗಣೆ ವಿರುದ್ಧದ ಅಂತರರಾಷ್ಟ್ರೀಯ ದಿನವನ್ನು ಆಚರಿಸಿ ಈ ಸಮಸ್ಯೆಯ ನಿಯಂತ್ರಣ ಮತ್ತು ಪರಿಹಾರದ ಕುರಿತು ನಿವಾರಣೆಯಲ್ಲಿ ಸಮುದಾಯ, ಸಮವಯಸ್ಕರು, ಕುಟುಂಬ, ಸಂಘ-ಸಂಸ್ಥೆಗಳವರು ಪ್ರಮುಖ ಪಾತ್ರ ವಹಿಸಬೇಕಾಗಿದೆ ಎಂದು ಮನವರಿಕೆ ಮಾಡಿತು. ಮಾದಕ ವಸ್ತು ದುರ್ಬಳಕೆ ಒಂದು ಮಾನಸಿಕ, ಸಾಮಾಜಿಕ ಸಮಸ್ಯೆಯಾಗಿದ್ದು, ಇಡೀ ಸಮುದಾಯವೇ ಇದರ ನಿವಾರಣೋಪಾಯದಲ್ಲಿ ಪಾಲ್ಗೊಳ್ಳಬೇಕೆಂದು ಸೂಚಿಸಿತು.

ವ್ಯಕ್ತಿ ಒಮ್ಮೆ ಈ ಚಕ್ರವ್ಯೂಹದಲ್ಲಿ ಸಿಲುಕಿಕೊಂಡರೆ ಹೊರಬರುವುದು ಕಷ್ಟಸಾಧ್ಯ. ಆರೋಗ್ಯಕರ ಜೀವನ ನಡೆಸಲು ಮಾದಕ ವಸ್ತುಗಳನ್ನು ತ್ಯಜಿಸಿ ಸುಂದರ ಜೀವನ ನಡೆಸಿ ಎಂಬ ಸಂದೇಶ ಸಾರುತ್ತಾ, ನಾವೆಲ್ಲರೂ ಸಂಘಟಿತರಾಗಿ ಸಮಾಜದಲ್ಲಿ ಜಾಗೃತಿ ಮೂಡಿಸಿದಾಗ ದುಶ್ಚಟ ಮುಕ್ತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ.

**- ಡಾ. ಗೀತಾ ಬಸವರಾಜು,**
ಉಪನ್ಯಾಸಕರು, ಎ.ವಿ.ಕೆ ಮಹಿಳಾ ಕಾಲೇಜು, ದಾವಣಗೆರೆ

# ಆಕಾರ ಚಿಕ್ಕದು, ಜನಪರ ಆಶಯಗಳು ಅಪಾರ...

**ತಾ**ನು ಹುಟ್ಟಿ ಬೆಳೆದ ಪರಿಸರವನ್ನು ಪ್ರೀತಿಸುತ್ತಾ, ಅಲ್ಲಿನ ಜನರ ವಾತ್ಸಲ್ಯದಲ್ಲಿ ತಾಯಿ-ತಂದೆಯರ ಮಮತೆಯನ್ನು ಕಾಣುವ, ಕನ್ನಡ ನಾಡು-ನುಡಿ, ಸಂಸ್ಕೃತಿಯ ಪರ ಸದಾ ಚಿಂತಿಸುವ, ಸನಾತನ ಹಿಂದೂ ಧರ್ಮದ ರಕ್ಷಣೆಯನ್ನು ರಕ್ತದ ಕಣಕಣದಲ್ಲಡಗಿಸಿ ಕೊಂಡಿರುವ ರಾಣೇಬೆನ್ನೂರು ನಗರಸಭೆ ಸದಸ್ಯ ಪ್ರಕಾಶ ಬುರುಡಿಕಟ್ಟಿ ಅವರು ಇಂದು 39 ರತ್ತ ಹೆಜ್ಜೆ ಹಾಕಲಿದ್ದಾರೆ.



ಸಾಮಾನ್ಯ ಕೃಷಿ ಕುಟುಂಬದಲ್ಲಿ ಜನಿಸಿ, ಕುಟುಂಬಕ್ಕೆ ಅಂಟಿದ ಪೈಲ್ವಾನ್ ಗಿರಿಯ ದಷ್ಟ -ಪುಷ್ಟತೆಯನ್ನು ಉಳಿಸಿಕೊಂಡು, ಜೊತೆಗೆ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ನಡೆಸಿ ಆರೋಗ್ಯ ವಂತ ಯುವಕರ ದಂಡು ಬೆಳೆಸಿರುವ, ಸರ್ವ ಧರ್ಮದ ಬಡಜನರ ಕಷ್ಟ-ಸುಖಗಳಲ್ಲಿ ಭಾಗಿಯಾಗುವ ಗಟ್ಟಿತನ ಮೈಗೂಡಿಸಿಕೊಂಡು, ಅವರಿಗೆ ಸಿಗುವ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಯೋಜನೆಗಳ ಸೌಲಭ್ಯಗಳನ್ನು ದೊರಕಿಸಲು ಜನಸಂಪರ್ಕ ಕಛೇರಿ ತೆರೆದಿದ್ದಾರೆ.

8 ನೇ ಶತಮಾನದಿಂದ ನಗರದ ಇತಿಹಾಸ ಪರಿಚಯಿಸುವ 'ಬಿನ್ನವೂರು' ಪುಸ್ತಕವನ್ನು ಮುದ್ರಿಸಿ ಹಂಚಿರುವುದು, ಶಾಲಾ ಮಕ್ಕಳಿಗೆ ಸುಧಾಮೂರ್ತಿ ಅವರಿಂದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮ ಆಯೋಜನೆ, ನಗರಸಭೆಯ ವಿವಾದಿತ ಜಾಗಗಳನ್ನು ನಗರಸಭೆಗೆ ಮರಳಿ ಕೊಡಿಸುವುದು, ಕೋವಿಡ್ ಸಮಯದಲ್ಲಿ ವಿವಿಧ ಕ್ಷೇತ್ರದ 8 ಸಾವಿರ ಕುಟುಂಬಗಳಿಗೆ ದಿನಸಿ ಸಾಮಗ್ರಿಗಳ ಕಿಟ್ ವಿತರಣೆ. ಮೂವರು ಅನಾಥ ಹೆಣ್ಣು ಮಕ್ಕಳ ಬದುಕಿಗೆ ದಾರಿ ಮಾಡಿದ್ದು, ಶಾಲಾ ಮಕ್ಕಳಿಗೆ ಉಚಿತ ಸೈಕಲ್, ನೋಟ್ ಪುಸ್ತಕ, ಬ್ಯಾಗ್ ವಿತರಣೆ, ಪ್ರತಿ ವರ್ಷ ಯುವಶಕ್ತಿ ಜೊತೆಗೂಡಿ ರಕ್ತದಾನ. ಹೀಗೆ 'ಆಡು ಮುಟ್ಟದ ಸೊಪ್ಪಿಲ್ಲ, ಪ್ರಕಾಶ ಮಾಡದ ಸೇವಾ ಕಾರ್ಯಗಳಿಲ್ಲ' ಎನ್ನುವ ಅಭಿಮಾನದ ಮಾತುಗಳು ಜನರಲ್ಲಿ ಕೇಳಿಬರುತ್ತಿವೆ.

ನಮ್ಮ ಕಲೆ, ಸಂಸ್ಕೃತಿ, ಇತಿಹಾಸ, ಪರಂಪರೆ ಎಲ್ಲವುಗಳನ್ನು ಗಣೇಶ ಹಬ್ಬದ ಮೂಲಕ ನೆನಪಿಸುವ ಕಾರ್ಯವನ್ನು ತಮ್ಮದೇ ಆದ 'ವಂದೇ ಮಾತರಂ ಸ್ವಯಂ ಸೇವಾ ಸಂಸ್ಥೆ' ಮೂಲಕ 'ರಾಣೇಬೆನ್ನೂರ ಕಾ ರಾಜಾ' 2009 ರಿಂದ ನಿರಂತರವಾಗಿ ಆಚರಣೆಯಲ್ಲಿದ್ದು, ಮುಂದುವರೆದಿದೆ.

**ಅಪರೂಪದ ಮದುವೆ:** ತನ್ನ ಮದುವೆಯ ಜೊತೆ ಸರ್ವ ಸಮಾಜದ 132 ಜೊತೆ ವಧು-ವರರಿಗೂ ಕಂಕಣ ಭಾಗ್ಯ ಕಲ್ಪಿಸಿ ತಲಾ 25 ಸಾವಿರ ಸಹಾಯ ಧನ ನೀಡಿದ್ದರು. ಸರ್ವರಿಗೂ ಭಗವದ್ಗೀತೆಯ ಸಾರವನ್ನು ತಿಳಿಸಬೇಕು ಎನ್ನುವ ಮಹದಾಸೆಯೊಂದಿಗೆ ಸರ್ವ ಸಮಾಜಗಳ 75 ಸಾವಿರ ಕುಟುಂಬಗಳಿಗೆ ಭಗವದ್ಗೀತೆ ಗ್ರಂಥಗಳ ಜೊತೆಗೆ ತನ್ನ ಲಗ್ನಪತ್ರಿಕೆ ಮತ್ತು ಬಡವರಿಗೆ ಉಡುಗೊರೆ ನೀಡಿ ಮದುವೆಗೆ ಆಹ್ವಾನಿಸಿದ್ದರು. ಇದೊಂದು ಹಿಂದೆಂದೂ ಕಾಣದ, ಮುಂದೆಯೂ ಕಾಣಲಾರದ ಅಪರೂಪದ ಮದುವೆಯಾಗಿದೆ.

**- ಮನೋಹರ ಮಲ್ಲಾಡದ,** ರಾಣೇಬೆನ್ನೂರು.

# ಅಘೋಷಿತ ತುರ್ತು ಪರಿಸ್ಥಿತಿ ಅತ್ಯಂತ ಅಪಾಯಕಾರಿ : ಡಿಬಿ

ದಾವಣಗೆರೆ, ಜೂ.28- 2014ರಿಂದ ನರೇಂದ್ರ ಮೋದಿ ಅವರು ಪ್ರಧಾನಿಯಾದ ಬಳಿಕ ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ. ಇಂದಿರಾಗಾಂಧಿ ಅವರ ಘೋಷಿತ ತುರ್ತು ಪರಿಸ್ಥಿತಿಗಿಂತ ಮೋದಿಯವರ ಅಘೋಷಿತ ತುರ್ತು ಪರಿಸ್ಥಿತಿ ಅತ್ಯಂತ ಅಪಾಯಕಾರಿಯಾಗಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಟೀಕಿಸಿದ್ದಾರೆ.

ಇಂದಿರಾಗಾಂಧಿ ಅವರು ಜಾರಿಗೆ ತಂದ ತುರ್ತು ಪರಿಸ್ಥಿತಿ ಅವರ ರಾಜಕೀಯ ವಿರೋಧಿಗಳಿಗೆ ಸ್ವಲ್ಪ ತೊಂದರೆಯಾಯಿತು. ಆದರೆ ದೇಶದ ಜನಸಾಮಾನ್ಯರಿಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ ಎಂದಿದ್ದಾರೆ.

ದೇಶದ ಬಡಜನರಿಗೆ ತುರ್ತು ಪರಿಸ್ಥಿತಿ ಸುವರ್ಣ ಕಾಲವಾಗಿತ್ತು. ಬಡಜನರು ಸಾಲ ಸೋಲ ಮಾಡಿ ತಮ್ಮ ಆಸ್ತಿ ಪಾಸ್ತಿ, ಪಾತ್ರೆ, ಪಗಡೆಗಳನ್ನು ಲೇವಾದೇವಿಗಾರರಿಗೆ ಸಾಲಕ್ಕೆ ಅಡವಿಟ್ಟಿದ್ದರು. ತುರ್ತು ಪರಿಸ್ಥಿತಿ ಜಾರಿಯಾದ ಕಾರಣ ತಮ್ಮ ಆಸ್ತಿ ಪಾಸ್ತಿ, ಪಾತ್ರೆ, ಪಗಡೆ ಇತರೆ ವಸ್ತುಗಳನ್ನು ಪುಕ್ಕಟೆಯಾಗಿ ವಾಪಾಸ್ ಪಡೆದರು ಎಂದು ಹೇಳಿದ್ದಾರೆ. 20 ಅಂಶಗಳ ಕಾರ್ಯಕ್ರಮ ಪರಿಣಾಮಕಾರಿಯಾಗಿ ಜಾರಿಗೆ ಬಂತು. ದೇಶದ ಕೃಷಿಯಲ್ಲಿ ಹೆಚ್ಚಿನ ಉತ್ಪಾದನೆಯಾಯಿತು. ದೇಶದ ರಫ್ತು ಜಾಸ್ತಿಯಾಗಿ. ವಿದೇಶಿ ಹೂಡಿಕೆಯಲ್ಲಿ ಹೆಚ್ಚಳ ಕಂಡಿತು ಮತ್ತು ದೇಶದಲ್ಲಿ ಹಿಂದೂ-ಮುಸ್ಲಿಮರು ಕೋಮು ಸೌಹಾರ್ದತೆಗೆ ಒತ್ತು ನೀಡಿದರು ಎಂದು ತಿಳಿಸಿದ್ದಾರೆ.



# ಮಾದಕ ದ್ರವ್ಯ ಸೇವನೆ ಮುಕ್ತ ಸಮಾಜಕ್ಕೆ ಸಂಕಲ್ಪ ಮಾಡೋಣ

## ಕುಂಬಳೂರು : ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ವಸಂತ್ ದೇವಾಡಿಗ ಮನವಿ

ಮಲೇಬೆನ್ನೂರು, ಜೂ.28- ಮಾದಕ ದ್ರವ್ಯ ಸೇವನೆ ಮುಕ್ತ ಸಮಾಜ ನಿರ್ಮಾಣಕ್ಕೆ ವಿದ್ಯಾರ್ಥಿಗಳು ಸಂಕಲ್ಪ ಮಾಡಬೇಕೆಂದು ಧರ್ಮಸ್ಥಳ ಯೋಜನೆಯ ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಮನವಿ ಮಾಡಿದರು.

ಅವರು, ಕುಂಬಳೂರು ಗ್ರಾಮದ ಬಸವ ಗುರುಕುಲದ ಶ್ರೀ ಶರಣ ಸಂಗಮ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಿಶ್ವ ಮಾದಕ ವಸ್ತು ವಿರೋಧಿ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ 'ಸ್ವಾಸ್ಥ್ಯ ಸಂಕಲ್ಪ' ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕಾಗಿ ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಅವರು ಸಂಕಲ್ಪ ಮಾಡಿದ್ದು, ಅದಕ್ಕಾಗಿ ರಾಜ್ಯದ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯ ಮತ್ತು ತಂಬಾಕು ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುತ್ತಿದ್ದೇವೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಜಿ.ಮಂಜುನಾಥ್ ಪಟೇಲ್ ಮಾತನಾಡಿ, ದುಶ್ಚಟಗಳಿಗೆ ಒಳಗಾಗಿರುವ ತಂದೆ ಹಾಗೂ ಪೋಷಕರನ್ನು ಅದರಿಂದ ಹೊರತರುವ ಕೆಲಸವನ್ನು ವಿದ್ಯಾರ್ಥಿಗಳು ಮಾಡುವ ಮೂಲಕ ಅವರಿಗೆ ಆರೋಗ್ಯ ಭಾಗ್ಯ ನೀಡಬೇಕೆಂದರು.

ಸಂಪನ್ಮೂಲ ವ್ಯಕ್ತಿ ಹೆಚ್.ಎಂ.ಸದಾನಂದ್ ಮಾತನಾಡಿ, ಪ್ರವಾಸಿ ತಾಣಗಳಲ್ಲಿ ಡ್ರಗ್ಸ್ ಮಾರಾಟ ನಿಲ್ಲಬೇಕು. ಮಾದಕ ವಸ್ತುಗಳ ಸೇವನೆ ಜೀವಕ್ಕೆ ಮಾರಕ ಎಂದು ಎಚ್ಚರಿಸಿದರು.

ಶಾಲಾ ಮುಖ್ಯ ಶಿಕ್ಷಕ ಬಸವರಾಜ್ ಗುಂಡಣ್ಣನವರ್ ಮಾತನಾಡಿ, ತಂದೆ-ತಾಯಿಗಳ ಕುಡಿತದಿಂದ ಬೇಸತ್ತು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಯತ್ನಿಸಿದ ಘಟನೆಗಳ ಉದಾಹರಣೆ ನೀಡಿದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಹಾಗೂ ಪತ್ರಕರ್ತ ಜಿಗಳಿ ಪ್ರಕಾಶ್, ನಂದಿತಾವರೆ ಮೇಲ್ವಿಚಾರಕಿ ಸಂತೋಷಿನಿ, ಸೇವಾ ಪ್ರತಿನಿಧಿ ರೇಖಾ, ಶಿಕ್ಷಕರಾದ ಹೆಚ್.ಎಂ.ಪ್ರವೀಣ್, ಬಿ.ಜಿ.ಮನೋಹರ್, ಗಿರೀಶ್ ಗಂಟೇರ್, ಮಂಜುಳಾ, ಶಿಲ್ಪಾ, ಗದಿಗೆಪ್ಪ ಚಕ್ರಸಾಲಿ, ಎನ್.ವಿರೂಪಾಕ್ಷಪ್ಪ ಈ ವೇಳೆ ಇದ್ದರು.


**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಲೇಔಟ್ 'ಎ' ಬ್ಲಾಕ್, ಬಾಟ್ಲಿ ಬಿಲ್ಡಿಂಗ್ ಹತ್ತಿರ, ಗ್ರೌಂಡ್ ಫ್ಲೋರ್‌ನಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ : (ಸಸ್ಯಹಾರಿಗಳಿಗೆ ಮಾತ್ರ)
ಮೊ. 94493-74164

**ಸೈಟುಗಳು ಮಾರಾಟಕ್ಕಿವೆ**
ಬನಂಶಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು/ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡೀಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

**Property Hub**
• EC
• E-swathu
• Building Licence
• Khatha Change
96118 66449

**ಸೈಟ್ ಬೇಕಾಗಿದೆ**
ವಿದ್ಯಾನಗರ, ತರಳಬಾಳು ಬಡಾವಣೆ, ವಿನಾಯಕ ಬಡಾವಣೆ, 40x50 ಅಥವಾ 40x60 ಪೂರ್ವ ಅಥವಾ ಉತ್ತರ ಮಾಲೀಕರು ನೇರವಾಗಿ ಸಂಪರ್ಕಿಸುವುದು.
94487 59274

**ಬೇಕಾಗಿದ್ದಾರೆ**
ಪತ್ರಿಕಾ ಕಚೇರಿಯಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ, ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 12x18 ಮೀಟರ್ (40X60) ದಕ್ಷಿಣ 100 ಅಡಿ ರಸ್ತೆಯ ಹಿಂಭಾಗದ 40 ಅಡಿ ರಸ್ತೆಗೆ
ಮಾಲೀಕರು : 96633 35235
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಬೇಕಾಗಿದ್ದಾರೆ**
ಬೇಸಿಕ್ ಕಂಪ್ಯೂಟರ್ ಶಿಕ್ಷಣ ಮತ್ತು ಟ್ಯಾಲಿ ಟೀಚ್ ಮಾಡಲು ಅನುಭವವುಳ್ಳ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಕಂಪ್ಯೂಟರ್ ಎಜುಕೇಶನ್
ಎಮ್.ಸಿ.ಸಿ. 'ಬಿ' ಬ್ಲಾಕ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ
90364 27272

**ಬೇಕಾಗಿದ್ದಾರೆ**
ಇವೆಂಟ್ ಮ್ಯಾನೇಜ್‌ಮೆಂಟ್‌ನಲ್ಲಿ ಕೆಲಸ ಮಾಡಲು
ಆಸಕ್ತಿ ಇರುವವರು ಸಂಪರ್ಕಿಸಿ :
ಎಸ್.ಎಸ್. ಇವೆಂಟ್ಸ್
96068 50128

**ಬೇಕಾಗಿದ್ದಾರೆ**
ACE TRACTOR SHOWROOM ಗಾಗಿ
ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
9916955111, 9448202030

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಹುಡುಗರು ಬೇಕಾಗಿದ್ದಾರೆ.
M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್
ನಂ. 43 ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052

**ಬೇಕಾಗಿದ್ದಾರೆ**
ನಮ್ಮ ಟೀ ಶಾಪಿನಲ್ಲಿ (ಬೆಲ್ಲದ ಚಾ ಕಂಪನಿ) ಕ್ಯಾಶಿಯರ್ ರಾಗಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ (ತಿಂಡಿ ಊಟ ಮತ್ತು ರಾತ್ರಿ ಊಟ ವಸತಿಯೊಂದಿಗೆ ನಮ್ಮದೇ ಆಗಿರುತ್ತೆ) ಸ್ಯಾಲರಿ 8000, ಬೆಳಗ್ಗೆ 10:00 ರಿಂದ 7:30 ಹೊಸ RTO ಆಫೀಸ್ ರೋಡ್ MG ಬಿಲ್ಡಿಂಗ್ ಎದುರುಗಡೆ ಸೈಟ್. ಮೊದಲು ಬಂದವರಿಗೆ ಆದ್ಯತೆ
80503 58132

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ನಗರ ಸಮೀಪದ ಎಲ್ಲೋ ಬೆಲ್ಟ್ ಜೋನಿನಲ್ಲಿ 9 ಎಕರೆ ಪಾಮಾಯಿಲ್ ತೋಟ, ಬೇಕಾದವರು ಸಂಪರ್ಕಿಸಿ :
99863 61250

**WANTED**
Boys Required For Billing Work At Food Mart Supermarket.
Quli : Any Degree
Mob : 98864 63531

**WANTED TEACHERS**
(English medium school)
* B.A B.Ed.-02- sub:English (English Major) *D. Ed/TCH-02
* Spoken English Teacher-02
* CPEd/BPEd-02 * NTC-02
JNANABHARATHI VIDYALAYA
60 feet road, Nittuvalli. Davangere-4.
9008735218, 9900357915

**FOR RENT**
Godown or factory with wood Machinery for rent @ 7R2 Karur KIADB, Davanagere
92421 45611

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಮನೆ ಬಾಡಿಗೆಗೆ ಇದೆ**
1 BHK, ನಂ. 164, 10ನೇ ಕ್ರಾಸ್, ಎ ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.
(ಸಸ್ಯಹಾರಿಗಳಿಗೆ ಮಾತ್ರ)
90351 09371

**ಅತೀ ಕಡಿಮೆ ಖರ್ಚಿನಲ್ಲಿ ವಿದೇಶಗಳಲ್ಲಿ MBBS**
98868 96574
86602 35013

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಮನ್, ಸೇಲ್ಸ್ ಗರ್ಲ್ಸ್ ಮತ್ತು ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1.
90351 11030

**SMART CITY CABS DAVANAGERE**
Minimum 4 km Rs - 99/-
Above per km Rs - 25/-
waiting charges per hours Rs - 100/- and 24 service will be available.
Ph : 08192 255555
94811 79933, 99868 18205

**ಮನೆ ಬಾಡಿಗೆಗೆ ಇದೆ**
5ನೇ ಮೇನ್ ರಾಮ್ ಅಂಡ್ ಕೋ ಸರ್ಕಲ್ ಹತ್ತಿರ 2BHK ಇರುವ ಮನೆ ಬಾಡಿಗೆಗೆ ಇದೆ.
ಆಸಕ್ತರು ಸಂಪರ್ಕಿಸಿ :
97431 50555

**ಆತ್ರೇಯ ಆಯುರ್ವೇದ ಚಿಕಿತ್ಸಾಲಯ**
ಇಲ್ಲಿ ಎಲ್ಲಾ ರೀತಿಯ ಆಯುರ್ವೇದ ಚಿಕಿತ್ಸೆ ಲಭ್ಯವಿದೆ
ಸಂಪರ್ಕ: 324/2, ಶ್ರೀನಿವಾಸ ಸಂಕೀರ್ಣ, 2 ನೇ ಮುಖ್ಯ, ಎವಿಕೆ ಕಾಲೇಜು ರಸ್ತೆ, ಜಿಲ್ಲಾ ಕ್ರೀಡಾಂಗಣದ ಹತ್ತಿರ, ಪಿಜೆ ಬಡಾವಣೆ, ದಾವಣಗೆರೆ-2.
63661 59101

**NEET, K-CET Long Term**
ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಅಕಾಡೆಮಿ
96202 62361

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ಬೇಕಾಗಿದ್ದಾರೆ**
ಕಾಫಿ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ನೇರವಾಗಿ ಸಂಪರ್ಕಿಸಿ
ಎ.ಎನ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ.
94482 72734

**ಮನೆ ಬಾಡಿಗೆಗೆ ಇದೆ**
ಎಲ್ಲಾ ಸೌಕರ್ಯ, ಉತ್ತರಕ್ಕೆ ಬಾಗಿಲಿರುವ, ವಾಸ್ತುವುಳ್ಳ ಡಬಲ್ ಬೆಡ್ ರೂಂ 1ನೇ ಮಹಡಿ ಮನೆ ಬಾಡಿಗೆಗಿದೆ. #1859/34, "ಭಾವ ಸಂಗಮ" 4ನೇ ಮೇನ್, LIC ಕಾಲೋನಿ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ-4.
9448746875, 8050357533

**ಮನೆ ಬಾಡಿಗೆಗೆ ಇದೆ**
"ಸಿರಿ ಸಾರಾ" #353, 1ನೇ ಮೇನ್, 11ನೇ ಕ್ರಾಸ್ ಬಿ ಬ್ಲಾಕ್, ಶ್ರೀ ದೇವರಾಜ ಅರಸು ಬಡಾವಣೆ, 1ನೇ ಮಹಡಿ ಮನೆ, 2 ಬೆಡ್ ರೂಂ, ಮುನ್ಸಿಪಲ್/ಬೋರ್‌ವೆಲ್ ಎಲ್ಲಾ ವ್ಯವಸ್ಥೆ ಇದೆ. ಉತ್ತರ ದಿಕ್ಕಿನ ಬಾಗಿಲು. ಎಲ್ಲಾ ಸೌಲಭ್ಯವಿರುವ ಮನೆ.
94489 63300, 88920 88250

**3BHK ಮನೆ ಬಾಡಿಗೆಗಿದೆ**
#2123/1, ರೆಡ್ ಆಕ್ಸೈಡ್ ಫ್ಲೋರಿಂಗ್, ಬೋರ್‌ವೆಲ್/ಮುನ್ಸಿಪಲ್ ನೀರಿನ ಗ್ರೌಂಡ್ ಫ್ಲೋರ್ ಮನೆ MCC ಎ ಬ್ಲಾಕ್, 4ನೇ ಕ್ರಾಸ್, ದಾವಣಗೆರೆ. ಅಫಿಷಿಯಲ್‌ಗೆ ಮೊದಲ ಅವಕಾಶ
98929 28277, 9833 209777

**ಸೈಟ್, ಮನೆ ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಮನೆ (2400 sqft) 30x50, ಪಶ್ಚಿಮ, ಡಾಲರ್ಸ್ ಕಾಲೋನಿ ಸೈಟ್ 40x51, ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಶಂಕರಲೀಲಾ ಫ್ಯುಯಲ್ ಸ್ಟೇಷನ್
ಆವರಗೆರೆ, ಜೈನ್ ಟೆಂಪಲ್ ಪಕ್ಕ, ದಾವಣಗೆರೆ.
90190 94446

**ನೀರಾವರಿ ಜಮೀನು ಮಾರಾಟಕ್ಕಿದೆ.**
ಚನ್ನಗಿರಿ ತಾಲ್ಲೂಕು ನಲ್ಕುದುರೆ ಗ್ರಾಮದಲ್ಲಿ 4 ಎಕರೆ 34 ಗುಂಟೆ ನೀರಾವರಿ ಜಮೀನು ಮಾರಾಟಕ್ಕೆ ಇದೆ. ಸಂಪರ್ಕಿಸಿ.
99805 15443

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಆನಗೋಡು ಸುತ್ತಮುತ್ತ ಇರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ ಮತ್ತು ಬಂಕ್‌ನಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ :
90082 28222, 99001 42052

**ನುಗ್ಗೆ ಸಸಿಗಳು ದೊರೆಯುತ್ತವೆ**
ಸಂಪರ್ಕಿಸಿ :
88612 10004
99014 12533

**ಸೈಟ್ ಮಾರಾಟಕ್ಕಿದೆ**
40x60 ಅಳತೆಯ ಸೈಟ್ ನಂ. 2291-HIG-1, ಕರ್ನಾಟಕ ಗೃಹ ಮಂಡಳಿ, ತುಂಗಭದ್ರಾ ಬಡಾವಣೆ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
94814 17793

**ವಾಣಿಜ್ಯ ಮಳಿಗೆಗಳು ಬಾಡಿಗೆಗೆ ಇವೆ**
40x44 ಅಳತೆಯುಳ್ಳ ಗ್ರೌಂಡ್ ಫ್ಲೋರ್ & ಸೆಲ್ಲರ್ ಫ್ಲೋರ್ ಹಾಗೂ 4x6 ಅಳತೆಯುಳ್ಳ ವಾಣಿಜ್ಯ ಮಳಿಗೆಗಳು ಬಾಡಿಗೆಗೆ ಇವೆ. #992 ಲಾಯರ್ ರೋಡ್ ಕೆ.ಬಿ. ಬಡಾವಣೆ, ದಾವಣಗೆರೆ-2. ಆಸಕ್ತರು ಸಂಪರ್ಕಿಸಿ :
85533 24486

**ಮನೆ ಬಾಡಿಗೆಗೆ ಇದೆ**
ಎಂಸಿಸಿ 'ಬಿ' ಬ್ಲಾಕ್, 9ನೇ ಮೇನ್, ದಾವಣಗೆರೆ ಹಾರ್ಟ್ ಆಸ್ಪತ್ರೆ ಹತ್ತಿರ, 2 ಬೆಡ್ ರೂಮ್ ಇರುವ 1ನೇ ಮಹಡಿ ಮನೆ ಬಾಡಿಗೆಗೆ ಇದೆ. ಮುನ್ಸಿಪಲ್ ಮತ್ತು ಬೋರ್ ನೀರಿನ ಸೌಲಭ್ಯವಿದೆ.
ಸಸ್ಯಹಾರಿಗಳಿಗೆ ಮಾತ್ರ
08192 220207

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಶಿವ-ಪಾರ್ವತಿಯಲ್ಲಿ 40x60 ಅಕ್ಕ-ಪಕ್ಕ ಪೂರ್ವ 30x55 ಅಕ್ಕ-ಪಕ್ಕ ಪೂರ್ವ, ಸರ್ಕಾರಿ ನೌಕರರ ಬಡಾವಣೆ 'ಬಿ' ಬ್ಲಾಕ್‌ನಲ್ಲಿ 30x50 ಉತ್ತರ ರೋಹನ್ ಗಾರ್ಡನ್‌ನಲ್ಲಿ 30x40 ಪೂರ್ವ ಮಿಟ್ಲಕಟ್ಟೆಯಲ್ಲಿ 20 ಗುಂಟೆ ಜಮೀನು CC ರಸ್ತೆ ಇದೆ. ಕೆ.ಬಿ. ಬಡಾವಣೆಯಲ್ಲಿ ಮನೆ 44x24 ಪೂರ್ವ ಮನೆ & ಸೈಟಗಳು ಮಾರಾಟಕ್ಕಿವೆ.
ಸಂಪರ್ಕಿಸಿ : ಸುರೇಶ್ ಪಿ.ಎಸ್. ಶಾಮನೂರು (ಪ್ರಾಪರ್ಟಿ ಅಡ್ವೈಸರ್)
84314 00907

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 6ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ (1700/- ರೂ. ಚದುರಡಿ) ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ :
98452 36274

**ಮನೆ ಮಾರಾಟಕ್ಕಿದೆ**
ದಾವಣಗೆರೆಯ ಸರಸ್ವತಿ ನಗರದಲ್ಲಿ 30x45 ಅಳತೆಯಲ್ಲಿ ಪಶ್ಚಿಮಾಭಿಮುಖವಾಗಿ ಕಟ್ಟಿರುವ ಮೂರು ಬೆಡ್ ರೂಮ್‌ನ ಡುಪ್ಲೆಕ್ಸ್ ಮನೆ ಇದಕ್ಕೆ ಹೊಂದಿಕೊಂಡಂತೆ ಸಿಂಗಲ್ ಬೆಡ್ ರೂಮ್ ಮನೆ ಮಾರಾಟಕ್ಕಿದೆ. ತಿಂಗಳಿಗೆ 20k ಯಿಂದ 22k ಬಾಡಿಗೆ ಬರುತ್ತದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
99454 92913

**ಸ್ಪೋಕನ್ ಇಂಗ್ಲೀಷ್ & ಕಂಪ್ಯೂಟರ್ ಅಕಾಡೆಮಿ**
33 ದಿನಗಳಲ್ಲಿ ಕಲಿಯಿರಿ
ವಿಕಾಸ್ ಅಕಾಡೆಮಿ, ದಾವಣಗೆರೆ.
93802 29199
97399 22225

**TUITIONS**
IGCSE, ICSE, CBSE and State Board from Class 5th to 12th MCC `A' Block
98444 92888

**ENGINEERING DIPLOMA TUTIONS**
(FOR ALL BRANCHES)
ಸಮೃದ್ಧಿ ಅಕಾಡೆಮಿ
81472 62361

**ವೈಬ್ಸ್ ಅಕಾಡೆಮಿಗೆ ಫ್ಯಾಶನ್ ಡಿಸೈನರ್ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಫ್ಯಾಕಲ್ಟಿ ಮತ್ತು ಡಿಸೈನ್ ಬಟ್ಟೆ ಹೊಲಿಯುವವರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು.
7022680766

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿ.ಜೆ ಬಡಾವಣೆ, ದಾವಣಗೆರೆ.

**ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ**
No. 1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಮದುವೆ ವಿಳಂಬ, ದಾಂಪತ್ಯ ಸ್ತ್ರೀ-ಪುರುಷ ವಶೀಕರಣ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಶತಃ ಸಿದ್ಧ.
(ಮನೆ) ಜಿ. ವಿ. ಭಟ್ಟರ್
2ನೇ ಹಂತ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ
89716 99826

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**GIRIJA MAKEOVER**
ಗಿರಿಜಾ ಮೇಕ್ ಓವರ್
30 day's Basic to Advance Makeup training classes from certified makeup artist.
For more details contact
9481776305
Also contact for RENTAL OUTFITS.

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಜಲ್ಲಿ ಕ್ರಷರ್ ಭೋಗ್ಯಕ್ಕೆ ಅಥವಾ ಮಾರಾಟಕ್ಕಿದೆ**
ದಾವಣಗೆರೆಯಿಂದ 10 ಕಿ.ಮೀ. ದೂರದಲ್ಲಿ
91104 69802
98808 77197

## ಏರ್‌ಟೆಲ್ ಮೊಬೈಲ್ ಸೇವಾ ದರ ಹೆಚ್ಚಳ

ನವದೆಹಲಿ, ಜೂ. 28 – ಭಾರತಿ ಏರ್‌ಟೆಲ್ ತನ್ನ ಪ್ರೀಪೇಯ್ಡ್ ಹಾಗೂ ಪೋಸ್ಟ್ ಪೇಯ್ಡ್ ಮೊಬೈಲ್ ಸೇವಾ ದರಗಳನ್ನು ಹೆಚ್ಚಿಸಿದೆ. ನಿನ್ನೆಯಷ್ಟೇ ರಿಲೈಯನ್ಸ್ ಜಿಯೋ ತನ್ನ ಕರೆ ದರಗಳನ್ನು ಹೆಚ್ಚಿಸಿತ್ತು.

ಜುಲೈ 3ರಿಂದ ಜಾರಿಗೆ ಬರುವಂತೆ ಏರ್‌ಟೆಲ್‌ನ ಸೇವಾ ದರಗಳನ್ನು ಶೇ.10-21ರವರೆಗೆ ಹೆಚ್ಚಿಸಲಾಗಿದೆ. ದಿನ ಒಂದರ ಆಡ್ ಆನ್ 1 ಜಿ.ಬಿ. ಡಾಟಾ ಬೆಲೆಯನ್ನು 19 ರೂ.ಗಳಿಂದ 22 ರೂ.ಗಳಿಗೆ ಹೆಚ್ಚಿಸಲಾಗಿದೆ.

ಪ್ರತಿದಿನ 2ಜಿ.ಬಿ. ಡಾಟಾದ ಒಂದು ವರ್ಷದ ಯೋಜನೆಯ ದರವನ್ನು 2,999 ರೂ.ಗಳಿಂದ 3,599 ರೂ.ಗಳಿಗೆ ಹೆಚ್ಚಿಸಲಾಗಿದೆ.

28 ದಿನಗಳ ಅನಿಯಮಿತ ಕರೆ ಹಾಗೂ 2 ಜಿ.ಬಿ. ಯೋಜನೆಯ 179 ರೂ.ಗಳ ಯೋಜನೆಯ ದರವನ್ನು 199 ರೂ.ಗಳಿಗೆ ಹೆಚ್ಚಿಸಲಾಗಿದೆ. ಪ್ರತಿ ಬಳಕೆದಾರನಿಂದ ಬರುವ ಆದಾಯ 300 ರೂ.ಗಳಷ್ಟು ಹೆಚ್ಚಿಸಬೇಕು ಎಂದು ಏರ್‌ಟೆಲ್ ಪ್ರತಿಪಾದಿಸುತ್ತಾ ಬಂದಿದೆ.

# ಬಾಲ್ಯ ವಿವಾಹ : ಪೋಷಕರ ವಿರುದ್ಧ ಪ್ರಕರಣ ದಾಖಲಿಸಲು ಡಿಸಿ ಸೂಚನೆ



ದಾವಣಗೆರೆ, ಜೂ.28- ಪ್ರಸಕ್ತ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ 26 ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗಿದ್ದು, ಇದರಲ್ಲಿ 25 ನ್ನು ತಡೆಗಟ್ಟಿ 2 ಪ್ರಕರಣಗಳಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆ ತರಲಾಗಿದೆ. ಎಲ್ಲಾದರೂ ಬಾಲ್ಯ ವಿವಾಹ ಕಂಡು ಬಂದಲ್ಲಿ, ಅಂತಹ ಪೋಷಕರ ಮೇಲೆ ಪ್ರಕರಣ ದಾಖಲಿಸುವಂತೆ ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಮಕ್ಕಳ ಕಲ್ಯಾಣ ಹಾಗೂ ರಕ್ಷಣಾ ಸಮಿತಿ ಪರಿಶೀಲನಾ ಸಭೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ ಪ್ರಗತಿ ಪರಿಶೀಲನಾ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಾಲ್ಯವಿವಾಹ ಒಂದು ಸಾಮಾಜಿಕ ಪಿಡುಗಾಗಿದ್ದು, ಇದನ್ನು ತಡೆಗಟ್ಟಲು ವ್ಯಾಪಕವಾಗಿ ಜನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಇನ್ನಿತರೆ ಇಲಾಖೆಗಳಿಂದ ಬರುವ ಜುಲೈ ತಿಂಗಳಲ್ಲಿ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಅಭಿಯಾನದ ರೀತಿ ಆಯೋಜಿಸಲು ಸೂಚಿಸಿದರು.

ಕಾರ್ಮಿಕರ ಮಕ್ಕಳು, ತಾಂಡಾಗಳಲ್ಲಿ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕುಟುಂಬಗಳಲ್ಲಿ ಹೆಚ್ಚಾಗಿ ಬಾಲ್ಯ ವಿವಾಹಗಳು ವರದಿಯಾಗುತ್ತಿರುವುದರಿಂದ ಕಾರ್ಮಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳಿಂದ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಭಿವೃದ್ಧಿ ಅಧಿಕಾರಿಗಳು ನರೇಗಾ ಕೂಲಿ ಕಾರ್ಮಿಕರಿಗೆ ಮತ್ತು ಸಾರ್ವಜನಿಕರಿಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ತಿಳಿಸಿ, ಬಾಲ್ಯವಿವಾಹ ನಡೆಯದೇ ಇರುವ ಮತ್ತು ಹದಿಹರೆಯದ ಬಾಲಕಿಯರು ಗರ್ಭಿಣಿಯಾಗದೆ ಇರುವಂತಹ ಪ್ರಕರಣಗಳನ್ನು ಗಮನದಲ್ಲಿ ಇಟ್ಟುಕೊಂಡು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿರುವ ಗ್ರಾಮ ಪಂಚಾಯಿತಿಗಳಿಗೆ ಪ್ರಶಂಸನಾ ಪತ್ರ ನೀಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ್ ಮಾತನಾಡಿ, ಮಕ್ಕಳ ಬಾಲ್ಯ ವಿವಾಹದಿಂದಾಗುವ ಪರಿಣಾಮಗಳ ಬಗ್ಗೆ ತಿಳಿಸಬೇಕು. ಬಾಲ್ಯ ವಿವಾಹ ಮಾಡುವುದರಿಂದ ಉಂಟಾಗುವ ಕಾನೂನಾತ್ಮಕ ತೊಡಕುಗಳ ಬಗ್ಗೆ ಪೋಷಕರಲ್ಲಿ ಮನವರಿಕೆ ಮಾಡಿಕೊಡಬೇಕೆಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ವಾಸಂತಿ ಉಪ್ಪಾರ್ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ 2024 ರ ಏಪ್ರಿಲ್, ಮೇ ತಿಂಗಳಲ್ಲಿ ಒಟ್ಟು 26 ದೂರುಗಳು ಬಂದಿದ್ದು, ಅವುಗಳಲ್ಲಿ 25 ಬಾಲ್ಯವಿವಾಹಗಳನ್ನು ತಡೆದು 2 ಪ್ರಕರಣಗಳಲ್ಲಿ ಕೋರ್ಟ್‌ನಿಂದ ತಡೆಯಾಜ್ಞೆ ಪಡೆಯಲಾಗಿದೆ.

1 ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಬಾಲ ನ್ಯಾಯ ಮಂಡಳಿಯಲ್ಲಿ ಹಿಂದಿನ 54, ಹೊಸದಾಗಿ 20 ಸೇರಿ 74, ಇದರಲ್ಲಿ 11 ಖುಲಾಸೆಯಾಗಿವೆ. ಪೋಕ್ಸೋದಡಿ 10 ಪ್ರಕರಣಗಳಿದ್ದು, 2 ಖುಲಾಸೆಯಾಗಿ 8 ಬಾಕಿ ಇವೆ. ಸರ್ಕಾರಿ ಬಾಲಕಿಯರ ಬಾಲ ಮಂದಿರದಲ್ಲಿ 61 ಹಾಗೂ ಬಾಲಕರ ಬಾಲ ಮಂದಿರದಲ್ಲಿ 32 ಮಕ್ಕಳಿದ್ದಾರೆ. ಇದರಲ್ಲಿ ಅನಾಥ ಮಕ್ಕಳು, ಏಕಪೋಷಕ ಮಕ್ಕಳು, ಇಬ್ಬರು ಪೋಷಕರಿರುವ ಮಕ್ಕಳು ಇದ್ದಾರೆ ಎಂದು ತಿಳಿಸಿದರು.

ಜಿ.ಪಂ. ಉಪಕಾರ್ಯದರ್ಶಿ ಕೃಷ್ಣನಾಯ್ಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಷಣ್ಮುಖಪ್ಪ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



## 98ರ ಸಂಭ್ರಮದಲ್ಲಿ ಚನ್ನಗಿರಿ ವಿರೂಪಾಕ್ಷಪ್ಪ ಅವರಿಗೆ ಗೌರವ ಸಮರ್ಪಣೆ

ದಾವಣಗೆರೆ, ಜೂ.28-ನಗರದ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದ ಆಜೀವ ಅಧ್ಯಕ್ಷ ಚನ್ನಗಿರಿ ವಿರೂಪಾಕ್ಷಪ್ಪ ಅವರಿಗೆ 98 ವರ್ಷ ತುಂಬಿರುವ ಸಂದರ್ಭದಲ್ಲಿ ಅವರಿಗೆ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದಿಂದ ಆತ್ಮೀಯವಾಗಿ ಗೌರವ ಸಮರ್ಪಣೆ ಮಾಡಲಾಯಿತು.

ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನ ಸಂಘದ ಅಧ್ಯಕ್ಷ ಆರ್.ಎಲ್. ಪ್ರಭಾಕರ್, ಕಾರ್ಯದರ್ಶಿ ರವೀಂದ್ರ ಗುಪ್ತ, ಶ್ರೀ ಕನ್ನಿಕಾ ಪರಮೇಶ್ವರಿ ಬ್ಯಾಂಕ್ ಅಧ್ಯಕ್ಷ ಆರ್.ಜಿ.ಶ್ರೀನಿವಾಸಮೂರ್ತಿ, ಕಾಶಿನಾಥ್, ಕಾಸಲ್ ಮಂಜುನಾಥ್, ಕಾಸಲ್ ಸತೀಶ್, ದೇವಸ್ಥಾನ ಸಂಘದ ಆಜೀವ ಗೌರವಾಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್, ಆರ್.ಎಸ್. ನಾರಾಯಣಸ್ವಾಮಿ, ರವೀಂದ್ರ ಗುಪ್ತ, ವಿದ್ಯಾಪೀಠದ ಕಾರ್ಯದರ್ಶಿ ಕೆ.ಎನ್. ಅನಂತರಾಮ ಶೆಟ್ಟಿ, ತಾತಾ ವೆಂಕಟಾ ಛಲಪತಿ, ಸತ್ಯನಾರಾಯಣಸ್ವಾಮಿ, ಪಿ. ರಾಜಗುಪ್ತ, ಅಜಯ್ ಕುಮಾರ್, ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

## ಸಾಕ್ಷಿಗಳು ತಿರುಗಿ ಬೀಳುವುದೇ ಶಿಕ್ಷೆಗೆ ಅಡ್ಡಿ

**(1ನೇ ಪುಟದಿಂದ)** ಬಂಧಿಸುವುದು ಕಡ್ಡಾಯವಲ್ಲ ಎಂದರು. ನಗರದ 45ನೇ ವಾರ್ಡ್‌ನಲ್ಲಿರುವ ಕರೂರು ಸರ್ಕಾರಿ ಶಾಲೆಗೆ ಜಮೀನು ದಾನ ಮಾಡಲಾಗಿದೆ. ಆದರೂ, ಈ ಶಾಲೆಯ ಜಮೀನು ತಮ್ಮದೇ ಎಂದು ಹೇಳಿಕೊಂಡು ಕೆಲವರು ಅಭಿವೃದ್ಧಿಗೆ ಅಡ್ಡಿಪಡಿಸುತ್ತಿದ್ದಾರೆ ಎಂದು ದಲಿತ ಮುಖಂಡ ಲಿಂಗರಾಜ್ ದೂರಿದರು.

ದಲಿತ ಮುಖಂಡ ಹೆಗ್ಗೆರೆ ರಂಗಪ್ಪ ಮಾತನಾಡಿ, ಸರ್ಕಾರದ ನಿಯಮಗಳ ಪ್ರಕಾರ ದಾವಣಗೆರೆ ಜಿಲ್ಲೆಯಲ್ಲಿ ಯಾರೂ ಬೇಡ ಜಂಗಮರಿಲ್ಲ. ಇಷ್ಟಾದರೂ ಲಿಂಗಾಯತ ಸಮುದಾಯಕ್ಕೆ ಸೇರಿದ ಕೆಲವರು ತಮ್ಮ ಮಕ್ಕಳ ಜಾತಿಯನ್ನು ಬೇಡ ಜಂಗಮ ಎಂದು ಶಾಲೆಗಳಲ್ಲಿ ಬರೆಸುತ್ತಿದ್ದಾರೆ. ಇದನ್ನು ತಡೆಯಬೇಕು ಎಂದು ಮನವಿ ಮಾಡಿಕೊಂಡರು.

ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಕ್ಕೆ ಅಂಬೇಡ್ಕರ್ ಅವರ ಹೆಸರಿಡಬೇಕು ಎಂದು ಇನ್ನೋರ್ವ ದಲಿತ ಮುಖಂಡ ನಿಂಗಪ್ಪ ಬನ್ನಿಹಟ್ಟಿ ಒತ್ತಾಯಿಸಿದರು.

ದಾವಣಗೆರೆಯ ಎಸ್ಸಿ - ಎಸ್ಟಿ ಕಾಲೋನಿಗಳಲ್ಲಿ ಒಂದೂ ದಾವಣಗೆರೆ ಒನ್ ಕೇಂದ್ರವಿಲ್ಲ. ಪರಿಶಿಷ್ಟರ ಕಾಲೋನಿಗಳಲ್ಲಿ ದಾವಣಗೆರೆ ಒನ್ ಕೇಂದ್ರ ತೆರೆಯಬೇಕು ಎಂದು ದಲಿತ ಮುಖಂಡ ಸೂರ್ಯ ಪ್ರಕಾಶ್ ಒತ್ತಾಯಿಸಿದರು.

ಸಭೆಯ ವೇದಿಕೆ ಮೇಲೆ ಉಪವಿಭಾಗಾಧಿಕಾರಿ ದುರ್ಗಾಶ್ರೀ, ಎಎಸ್‌ಪಿ ವಿಜಯ್ ಕುಮಾರ್ ಸಂತೋಷ್, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ನಾಗರಾಜ್ ಉಪಸ್ಥಿತರಿದ್ದರು.

### ಬಾಬು ಜಗಜೀವನರಾಂ ಭವನದಲ್ಲಿ ಕೌಶಲ್ಯಾಭಿವೃದ್ಧಿ

ನಗರದ ಬಾಬು ಜಗಜೀವನರಾಂ ಭವನ ಪಾಳು ಬಿದ್ದಿದೆ. ಇದು ಅನೈತಿಕ ಚಟುವಟಿಕೆಯ ತಾಣವಾಗುತ್ತಿದೆ ಎಂದು ದಲಿತ ಮುಖಂಡ ಲಿಂಗರಾಜ್ ದೂರಿದರು.

ಈ ಭವನವನ್ನು ನಗರ ಪಾಲಿಕೆಯ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ನೌಕರರ ಕೌಶಲ್ಯಾಭಿವೃದ್ಧಿಗೆ ಬಳಸಿಕೊಳ್ಳಲು ಪರಿಶೀಲಿಸಲಾಗುತ್ತಿದೆ ಎಂದು ಎಸ್ಪಿ ಉಮಾ ಪ್ರಶಾಂತ್ ತಿಳಿಸಿದರು.

## ನಗರದಲ್ಲಿ ನಾಳೆ ಕೀಲು - ಮೂಳೆಗಳಿಗೆ ಚಿಕಿತ್ಸೆ

ದಾವಣಗೆರೆ, ಜೂ.28- ಕೀಲು-ಮೂಳೆಗಳು ಮತ್ತು ಇತರೆ ಆರೋಗ್ಯ ಉಚಿತ ಚಿಕಿತ್ಸಾ ಶಿಬಿರವು ನಾಡಿದ್ದು ದಿನಾಂಕ 30ರ ಭಾನುವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 2ರವರೆಗೆ ನಗರದ ಹರಳೆಣ್ಣೆ ಕೊಟ್ರಬಸಪ್ಪ ವೃತ್ತದ ಬಳಿ ಇರುವ ಅನುಪ ಹಾಸ್ಪಿಟಲ್‌ನಲ್ಲಿ ನಡೆಯಲಿದೆ ಎಂದು ಡಾ. ವಿನಯ್ ತಿಳಿಸಿದ್ದಾರೆ.

ವಿವರಕ್ಕೆ ಮೊಬೈಲ್ : 96321 31626 ಅಥವಾ 78928 34138 ರಲ್ಲಿ ಸಂಪರ್ಕಿಸಬಹುದು.

## ಜು.21ರಂದು ತಾಲ್ಲೂಕು ವೀರಶೈವ ಮಹಾಸಭಾದ ಚುನಾವಣೆ

ದಾವಣಗೆರೆ, ಜೂ.28- ಅಖಿಲ ಭಾರತ ವೀರಶೈವ ಮಹಾಸಭಾದ 2024ರಿಂದ 29ರ ಅವಧಿಗೆ ತಾಲ್ಲೂಕು ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನ ಮತ್ತು ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಜುಲೈ 21ಕ್ಕೆ ಚುನಾವಣೆ ನಡೆಯಲಿದೆ ಎಂದು ಉಪ ಚುನಾವಣಾಧಿಕಾರಿ ವಿ. ಶಿವಮೂರ್ತಿ ತಿಳಿಸಿದ್ದಾರೆ.

ಇಂದಿನಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದ್ದು ಜುಲೈ 4ರಂದು ನಾಮಪತ್ರ ಸಲ್ಲಿಕೆಗೆ ಕೊನೆ ದಿನವಾಗಿದ್ದು ಅಂದೇ ನಾಮಪತ್ರ ಹಿಂಪಡೆಯಬಹುದು ಮತ್ತು ಜು.5ರಂದು ನಾಮಪತ್ರ ಪರಿಶೀಲನೆ ನಡೆಯಲಿದೆ.

ನಗರದ ಪಿ.ಬಿ. ರಸ್ತೆಯಲ್ಲಿನ ವ್ಹಿ. ಎಸ್ ಪ್ಲಾಜಾದಲ್ಲಿನ ಕಚೇರಿಯಲ್ಲಿ ನಾಮಪತ್ರ ಸ್ವೀಕಾರ ಮಾಡಲಾಗುವುದು. ವಿವರಕ್ಕೆ ಸಂಪರ್ಕಿಸಿ : 9844550884, 9880132354.

## ಡೆಂಘಿ : ಕಾಲೇಜು ವಿದ್ಯಾರ್ಥಿನಿ ಸಾವು



ಸಾಸ್ವೆಹಳ್ಳಿ, ಜೂ. 28- ಡೆಂಘಿಯಿಂದ ವಿದ್ಯಾರ್ಥಿನಿ ಯೊಬ್ಬರು ಬುಧವಾರ ತಡರಾತ್ರಿ ಸಾವಿಗೀಡಾದ ಘಟನೆ ಸಮೀಪದ ಹನುಮನಹಳ್ಳಿಯಲ್ಲಿ ನಡೆದಿದೆ. ಅನುಷಾ (18) ದ್ವಿತೀಯ ಪಿಯುಸಿಯಲ್ಲಿ ಶೇ.93 ರಷ್ಟು ಅಂಕ ಗಳಿಸಿ ಇಂಜಿನಿಯರಿಂಗ್ ಸೇರುವ ಬಯಕೆ ಹೊಂದಿದ್ದರು.

ಶನಿವಾರ ಬೆಳಗ್ಗೆ ಜ್ವರದಿಂದ ಶಿವಮೊಗ್ಗ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗಿರುವುದಿಲ್ಲ ಎಂದು ಪೋಷಕರು ತಿಳಿಸಿದರು. ಮೃತರ ತಾಯಿ ಸಾಸ್ವೆಹಳ್ಳಿ ಅಂಗನವಾಡಿ ಕಾರ್ಯಕರ್ತೆಯಾಗಿದ್ದಾರೆ.

## ಕೆಂಪೇಗೌಡರ ಆದರ್ಶ ಯುವ ಪೀಳಿಗೆಗೆ ಮಾದರಿ



### ಜಗಳೂರಿನ ಕಾರ್ಯಕ್ರಮದಲ್ಲಿ ಶಾಸಕ ಬಿ.ದೇವೇಂದ್ರಪ್ಪ

ಜಗಳೂರು, ಜೂ. 28- ಜಾತ್ಯತೀತವಾಗಿ ಎಲ್ಲಾ ವರ್ಗದವರ ಏಳ್ಗೆಯ ದೂರದೃಷ್ಟಿಯಿಂದ ಬೆಂಗಳೂರು ನಗರ ನಿರ್ಮಿಸಿದ ಕೆಂಪೇಗೌಡ ಅವರ ಆದರ್ಶಗಳು ಇಂದಿನ ಯುವ ಪೀಳಿಗೆಗೆ ಮಾದರಿ ಎಂದು ಶಾಸಕ ಬಿ.ದೇವೇಂದ್ರಪ್ಪ ಹೇಳಿದರು.

ಪಟ್ಟಣದ ಗುರುಭವನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 515 ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸರ್ಕಾರದಿಂದ ಮಹನೀಯರ ಜಯಂತಿಗ ಳನ್ನು ಆಚರಣೆ ಮಾಡುತ್ತಿರುವುದು ಅವರ ಕೊಡು ಗೆಗಳನ್ನು ಸ್ಮರಿಸಿಕೊಂಡು ಮಕ್ಕಳ ಜೀವನದಲ್ಲಿ ಪ್ರೇರ ಣೆಯಾಗುವ ಸದುದ್ದೇಶದಿಂದ ಎಂದು ತಿಳಿಸಿದರು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡ ಅವರ ಹೆಸರು ಇಟ್ಟಿರುವುದು ಸಂತಸದ ಸಂಗತಿ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ತಾಲ್ಲೂಕು ಕಚೇರಿಯಿಂದ ಅಂಬೇಡ್ಕರ್ ವೃತ್ತ, ಮಹಾತ್ಮಗಾಂಧಿ ವೃತ್ತದ ಮೂಲಕ ಡೊಳ್ಳು ಕುಣಿತ, ವಾದ್ಯ ವೃಂದದ ಮೂಲಕ ಶಾಲಾ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು.

ಸಮಾರಂಭದಲ್ಲಿ ಕೆಪಿಸಿಸಿ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್,ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಬಿ.ಮಹೇಶ್ವರಪ್ಪ, ತಹಶೀಲ್ದಾರ್ ಸಯ್ಯೈಯ್ಯದ್ ಕಲೀಂ ವುಲ್ಲಾ, ಪ.ಪಂ ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ತಾ.ಪಂ. ಪ್ರಭಾರಿ ಇಓ ಮಿಥುನ್ ಕಿಮಾವತ್, ಬಿಇಓ ಹಾಲಮೂರ್ತಿ, ಬಿಆರ್ ಸಿ ಡಿ.ಡಿ. ಹಾಲಪ್ಪ, ಸಿ ಡಿಪಿಓ ಬೀರೇಂದ್ರಕುಮಾರ್ ಇದ್ದರು.

## ರಾಜಕಾಲುವೆ ಹೂಳು ತೆಗೆಯಲು ಮೇಯರ್ ನಿರ್ದೇಶನ

**(1ನೇ ಪುಟದಿಂದ)** ಶಾಸಕರೂ ಆಗಿರುವ ಕಾರಣ ಮಲ್ಲಿಕಾರ್ಜುನ್ ಅವರ ಸಲಹೆ, ಮಾರ್ಗದರ್ಶನ ಪಡೆಯುವುದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸಿದರು.

ಜಲಸಿರಿ ಯೋಜನೆಯಡಿ ಬಿಲ್ ನೀಡಿಕೆ ವಿಚಾರ ಸಂಬಂಧ ಸಚಿವರ ಜೊತೆ ಸಮಾಲೋಚನೆ ನಡೆಸುತ್ತೇವೆ. ಜನರಿಗೆ ತೊಂದರೆ ಆಗದಂತೆ ಕ್ರಮ ಕೈಗೊಳ್ಳುವ ಸಲುವಾಗಿ ಸಚಿವರ ಬಳಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ. 2021ರಲ್ಲಿ ಆಸ್ತಿ ತೆರಿಗೆ ಹೆಚ್ಚಿಸಲು ಬಿಜೆಪಿ ಆಡಳಿತವಿದ್ದ ಪಾಲಿಕೆಯಲ್ಲಿ ನಿರ್ಧರಿಸಲಾಗಿತ್ತು. ಆಗಲೇ ನಾವು ವಿರೋಧ ಮಾಡಿದ್ದೇವೆ. ಇದಕ್ಕೆ ಕ್ಯಾರೇ ಎನ್ನಲಿಲ್ಲ. ಆದರೆ, ಈಗ ಮುದ್ರಾಂಕ ಶುಲ್ಕ, ಸಬ್ ರಿಜಿಸ್ಟ್ರಾರ್ ಶುಲ್ಕವೂ ಸೇರಿದಂತೆ ಎಲ್ಲಾ ದರಗಳು ಹೆಚ್ಚಳವಾಗಿವೆ. ಕೇವಲ ದಾವಣಗೆರೆ ಮಹಾನಗರ ಪಾಲಿಕೆ ಮಾತ್ರವಲ್ಲ, ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಹೆಚ್ಚಳವಾಗಿದೆ. ಇದು ವಿಪಕ್ಷದವರಿಗೆ ಗೊತ್ತಿಲ್ಲವೇ ? ಎಂದು ಗಡಿಗುಡಾಳ್ ಮಂಜುನಾಥ್, ವಿನಾಯಕ್ ಪೈಲ್ವಾನ್ ಪ್ರಶ್ನಿಸಿದರು.

ಬಿಜೆಪಿಯಲ್ಲಿ ಲೋಕಸಭೆ ಚುನಾವಣೆಗೆ ಮುನ್ನ, ಚುನಾವಣಾ ಫಲಿತಾಂಶ ಬಂದ ಬಳಿಕ ಏನಾಗಿದೆ ? ಏನಾಗುತ್ತಿದೆ ಎಂಬುದು ಜಿಲ್ಲೆಯ ಜನತೆ ನೋಡುತ್ತಿದ್ದಾರೆ. ನಿತ್ಯವೂ ಕಚ್ಚಾಡುತ್ತಾ, ಒಬ್ಬರ ಮೇಲೆ ಒಬ್ಬರು ಆರೋಪ ಮಾಡುತ್ತಿರುವುದು ನಮಗೂ ಗೊತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಸದೃಢ ಆಡಳಿತ ನೀಡಲಾಗುತ್ತಿದೆ.

ಪಾಲಿಕೆಯಲ್ಲಿ ಉತ್ತಮ ಕೆಲಸಗಳಾಗುತ್ತಿದ್ದು, ಇದನ್ನು ಸಹಿಸಲು ಆಗದೇ ವಿಪಕ್ಷ ಸದಸ್ಯರು ಆರೋಪ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

## ಇಂದಿನಿಂದ ಮೇಲ್ವಿಚಾರಕರ ಹುದ್ದೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

ದಾವಣಗೆರೆ, ಜೂ.28- ಜಿಲ್ಲಾ ವ್ಯಾಪ್ತಿಯಲ್ಲಿ 206 ಗ್ರಾಮ ಪಂಚಾಯತಿಗಳಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಿದ್ದು, ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ಪ್ರಸ್ತುತ ಖಾಲಿ ಇರುವ 16 ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳ ಮೇಲ್ವಿಚಾರಕರ ಹುದ್ದೆ ನೇಮಕ ಮಾಡಿಕೊಳ್ಳಲು ನಾಳೆ ದಿನಾಂಕ 29 ರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

**ಖಾಲಿ ಇರುವ ಹುದ್ದೆಗಳು :** ರಾಜಗೊಂಡನಹಳ್ಳಿ, ಬೇತೂರು, ಕೊಂಡಜ್ಜಿ, ಹೆಬ್ಬಾಳು, ಕಬ್ಬಳ, ಉಕ್ಕಡಗಾತ್ರಿ, ಹಳೇಬಾತಿ, ಪಾಂಡೋಮಟ್ಟಿ, ಕಂದನಕೋವಿ, ಕಕ್ಕರಗೊಳ್ಳ, ಬನ್ನಿಕೋಡು, ವಡೆಯರ ಹತ್ತೂರು, ಓಬವ್ವನಾಯಕನಹಳ್ಳಿ (ನರಗನಹಳ್ಳಿ), ದೊಡ್ಡಬ್ಬಿಗೆರೆ, ಅಣಜಿ, ಗುಡಾಳು ಇಲ್ಲಿ ಖಾಲಿ ಇರುತ್ತವೆ.

ಆಸಕ್ತ ಅಭ್ಯರ್ಥಿಗಳು ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಿ, ನಂತರ ಸ್ವೀಕೃತಿ ಪತ್ರದ ಪ್ರತಿಯೊಂದಿಗೆ ದಾಖಲೆಗಳನ್ನು ಲಗತ್ತಿಸಿ ಜಿಲ್ಲಾ ಪಂಚಾಯತ್ ಕಚೇರಿ ಆಡಳಿತ ವಿಭಾಗದ ಕೊಠಡಿ ಸಂ.25ಕ್ಕೆ ಜುಲೈ 20 ರೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಂಖ್ಯೆ 08192-226655 ಗೆ ಕರೆ ಮಾಡಬಹುದು ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ತಿಳಿಸಿದ್ದಾರೆ.

## ಹವಾಮಾನ ಮುನ್ಸೂಚನೆ ಮುಗ್ಗರಿಸುವಂತೆ ಮಾಡಿದ ದೆಹಲಿ ಮಳೆ

ನವದೆಹಲಿ, ಜೂ. 28 – ರಾಜಧಾನಿ ದೆಹಲಿಯಲ್ಲಿ ಶುಕ್ರವಾರ ಧಾರಾಕಾರ ಮಳೆ ಸುರಿದಿರುವುದು ಹವಾಮಾನ ಮುನ್ಸೂಚನೆ ವ್ಯವಸ್ಥೆಗಳು ಮುಗ್ಗರಿಸುವಂತೆ ಮಾಡಿದೆ. ದಾಖಲೆಯ 228.1 ಮಿ.ಮೀ. ಮಳೆ ಸುರಿದಿದೆ. ಇದು ಜೂನ್ ತಿಂಗಳ ಸರಾಸರಿ ಮಳೆಯಾದ 74.1 ಮೀ.ಮೀ.ಗಿಂತ ಮೂರು ಪಟ್ಟು ಹೆಚ್ಚಾಗಿದೆ. ದೆಹಲಿಯಷ್ಟೇ ಅಲ್ಲದೇ ಹಿಮಾಚಲ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲೂ ಧಾರಾಕಾರ ಮಳೆಯಾಗುತ್ತಿದೆ. ಶುಕ್ರವಾರ ಸಾಧಾರಣ ಮಳೆಯಾಗುತ್ತದೆ ಎಂದು ಹವಾಮಾನ ಇಲಾಖೆಯು ಜೂನ್ 26ರಂದು ಮುನ್ಸೂಚನೆ ನೀಡಿತ್ತು. ಆದರೆ, ಜೂನ್ 29 ಮತ್ತು 30ರಂದು ಅತಿ ಭಾರೀ ಮಳೆ ಸುರಿಯಲಿದೆ ಎಂದು ತಿಳಿಸಲಾಗಿತ್ತು.

## ಸೇಂಟ್‌ಜಾನ್ಸ್ ವಿದ್ಯಾರ್ಥಿ ಪರಿಷತ್ತಿನ ಸಾರ್ವತ್ರಿಕ ಚುನಾವಣೆ





ದಾವಣಗೆರೆ, ಜೂ. 28- ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎನ್ನುವ ನಿಟ್ಟಿನಲ್ಲಿ ನಗರದ ಸೇಂಟ್‌ಜಾನ್ಸ್ ವಿದ್ಯಾಸಂಸ್ಥೆಯ ಶಾಲೆಯಲ್ಲಿ ವಿದ್ಯಾರ್ಥಿ ಪರಿಷತ್ತಿನ ಸಾರ್ವತ್ರಿಕ ಚುನಾವಣೆಯನ್ನು ನಡೆಸಲಾಯಿತು.

ವಿವಿಧ ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ಅಭ್ಯರ್ಥಿ ಗಳನ್ನಾಗಿ ಕಣಕ್ಕಿಳಿಸಿ ನೂತನ ಆಂಡ್ರಾಯ್ಡ್ ಮೊಬೈಲ್ ನಲ್ಲಿ ಎಲೆಕ್ಷನ್ ಆ್ಯಪ್ ಅಳವಡಿಕೆ ಮಾಡಿಕೊಂಡು, ಯಥಾವತ್ತಾಗಿ ಸಾರ್ವತ್ರಿಕ ಚುನಾವಣಾ ಪದ್ಧತಿಯಂತೆ ಗುಪ್ತ ಮತದಾನ ಪದ್ಧತಿ ಅನುಸರಿಸಲಾಯಿತು.

ವಿದ್ಯಾರ್ಥಿ ಪರಿಷತ್ತಿನ ಈ ಚುನಾವಣೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಸಾಂಸ್ಕೃತಿಕ ವಿಭಾಗದ ಮುಖ್ಯಸ್ಥ, ಶಿಸ್ತು ಪಾಲನಾ ಮುಖ್ಯಸ್ಥ, ಕ್ರೀಡಾ ವಿಭಾಗದ ಮುಖ್ಯಸ್ಥ ಮೊದಲಾದ ವಿಭಾಗಗಳಿಗೆ ಅಭ್ಯರ್ಥಿಗಳು ಸ್ಪರ್ಧಿಸಿ, ಮತ ಯಾಚಿಸಿ ಪ್ರಜಾಪ್ರಭುತ್ವದ ಚುನಾವಣಾ ವೈಖರಿಯಂತೆ ಚುನಾವಣೆಯನ್ನು ಯಶಸ್ವಿಗೊಳಿಸಲಾಯಿತು.

ಈ ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್.ಅನಿಲ್ ಕುಮಾರ್, ಕಾರ್ಯದರ್ಶಿ ಉಮಾಪತಯ್ಯ, ಖಜಾಂಚಿ ಪ್ರವೀಣ್ ಹುಲ್ಲುಮನೆ ಮತ ಯಂತ್ರದಲ್ಲಿ ತಮ್ಮ ಅಮೂಲ್ಯವಾದ ಮತವನ್ನು ಚಲಾಯಿಸುವ ಮೂಲಕ ಚಾಲನೆ ನೀಡಿದರು.

ವಿದ್ಯಾರ್ಥಿ ಪರಿಷತ್ತಿನ ಚುನಾವಣಾ ಮುಖ್ಯಸ್ಥರನ್ನಾಗಿ ಮೌನೇಶ್ ಹಾಗೂ ಶ್ರೀಮತಿ ಉಮ್ಮೇಸಲ್ಮಾ ಅವರನ್ನು ಆಯೋಜಿಸಲಾಗಿದ್ದು, ಸಮಸ್ತ ಸಮಾಜ ವಿಜ್ಞಾನ ಶಿಕ್ಷಕ ವೃಂದದವರೊಂದಿಗೆ ಯಶಸ್ವಿಗೊಳಿಸಿದರು.

ಈ ಸನ್ನಿವೇಶದಲ್ಲಿ ಸಂಸ್ಥೆಯ ಪ್ರಾಂಶುಪಾಲ ಸೈಯ್ಯದ್ ಆರಿಫ್ ಆರ್. ಹಾಗೂ ಶ್ರೀಮತಿ ಪ್ರೀತಾ.ಟಿ.ರೈ, ಉಪಪ್ರಾಂಶುಪಾಲರಾದ ಶ್ರೀಮತಿ ನೇತ್ರಾವತಿ ಹಾಗು ಶಿಕ್ಷಕ ವೃಂದದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ವಿಮಾನ ನಿಲ್ದಾಣದ ತಾರಸಿ ಕುಸಿತ

ನವದೆಹಲಿ, ಜೂ.28 – ದೆಹಲಿ ವಿಮಾನ ನಿಲ್ದಾಣದ ಟರ್ಮಿನಲ್ - 1ರ ತಾರಸಿಯ ಭಾಗ ಕುಸಿದು ಕ್ಯಾಬ್ ಚಾಲಕರೊಬ್ಬರು ಮೃತಪಟ್ಟಿದ್ದಾರೆ ಹಾಗೂ ಆರು ಜನರು ಗಾಯಗೊಂಡಿದ್ದಾರೆ. ಶುಕ್ರವಾರ ಸುರಿದ ಭಾರೀ ಮಳೆಯಿಂದಾಗಿ ತಾರಸಿ ಕುಸಿದಿದೆ. ನಂತರದಲ್ಲಿ ವಿಮಾನಗಳ ಹಾರಾಟ ತಡೆಯಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯ ವಿವರ ಪಡೆದರು. ತಾರಸಿಯ ಹೊದಿಕೆ ಜೊತೆಗೆ ಕಂಬಗಳೂ ಉರುಳಿವೆ. ಇದರಿಂದಾಗಿ ಪಿಕಪ್ ಹಾಗೂ ಡ್ರಾಪ್ ಏರಿಯಾದಲ್ಲಿದ್ದ ಕಾರುಗಳಿಗೆ ಹಾನಿಯಾಗಿದೆ.

ಬೇಕಾಗಿದ್ದಾರೆ

ಪ್ರತಿಷ್ಠಿತ ನರ್ಸಿಂಗ್ ಹೋಮ್‌ನಲ್ಲಿ ಕೆಲಸ ನಿರ್ವಹಿಸಲು ವಾರ್ಡ್ ಬಾಯ್, ಆಯಾಗಳು ಬೇಕಾಗಿದ್ದಾರೆ. ಸಂಪರ್ಕಿಸಿ :

ಮೊ. 99023 22422

DUTY DOCTORS REQUIRED
FOR A
REPUTED NURSING HOME
M.B.B.S. (Completed) &
B.A.M.S. (Completed)
DAY DUTY OR NIGHT DUTY
ATTRACTIVE SALARY WILL BE GIVEN
CONTACT NUMBER : 70192 20661

ಹಕ್ಕುಪತ್ರ ಕಳೆದಿದೆ

**ಶ್ರೀಮತಿ ರೇಣುಕಮ್ಮ ಕೋಂ ಜೆ. ತಿಪ್ಪೇಸ್ವಾಮಿ,** ವಯಸ್ಸು: 55 ವರ್ಷ, ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೆಳವನೂರು ಗ್ರಾಮ ಇಲ್ಲಿ ವಾಸವಾಗಿರುವ ನಾನು ಈ ಕೆಳಕಂಡ ವಿಷಯವನ್ನು ಪ್ರಮಾಣೀಕರಿಸುವುದೇನೆಂದರೆ:-

ನಾನು ಮೇಲ್ಕಂಡ ವಿಳಾಸದಲ್ಲಿ ಖಾಯಂ ನಿವಾಸಿಯಾಗಿರುತ್ತೇನೆ. ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೆಳವನೂರು ಗ್ರಾಮದ ಕಣದ ಜಾಗದ ನಂ 107 ಅಳತೆ 40X40 ಅಡಿವುಳ್ಳ ಸೊತ್ತಿನ ಮೂಲ ಹಕ್ಕುಪತ್ರವನ್ನು ಈ ಹಿಂದೆ ಕುರ್ಕಿ ಮಂಡಲ ಪಂಚಾಯಿತಿ ವತಿಯಿಂದ ಈ ಹಿಂದೆ **ಬಿ ಬೈ ಉಜ್ಜಪ್ಪ ಬಿನ್ ವೀರಭದ್ರಪ್ಪ** ಇವರ ಹೆಸರಿಗೆ ಹಕ್ಕುಪತ್ರ ಬಂದಿದ್ದು ಸದರಿ ಹಕ್ಕಪತ್ರವು ಈ ಹಿಂದೆ ಸುಮಾರು ಒಂದು ವರ್ಷಗಳ ಹಿಂದೆ ಮನೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ಕಾರಣಾಂತರದಿಂದ ಕಳಿದುಹೋಗಿರುತ್ತದೆ.

ಈಗ ಸದರಿ ಸೊತ್ತಿನ ಖಾತಾ ವರ್ಗಾವಣೆ ಸಲುವಾಗಿ ಈ ಮೇಲ್ಕಂಡ ಹಕ್ಕುಪತ್ರ ಕಳೆದಿರುವುದು ನಿಜ ಎಂದು ದೃಢೀಕರಿಸುವ ಸಲುವಾಗಿ ಈ ಪ್ರಮಾಣ ಪತ್ರವನ್ನು ಮಾಡಿಸಿರುತ್ತೇನೆ.

ಈ ಮೇಲ್ಕಂಡ ಎಲ್ಲಾ ಅಂಶಗಳು ಸತ್ಯ ಸಂಗತಿಗಳಾಗಿರುತ್ತವೆ ಎಂದು ಸದರಿ ಪ್ರಮಾಣ ಪತ್ರದ ಮೂಲಕ ದೇವರ ಹೆಸರಿನಲ್ಲಿ ಪ್ರಮಾಣೀಕರಿಸುತ್ತೇನೆ.

ಪ್ರಮಾಣಕರ್ತರು
**ಶ್ರೀಮತಿ ರೇಣುಕಮ್ಮ**
**ಕೋಂ ಜೆ. ತಿಪ್ಪೇಸ್ವಾಮಿ**

ಸ್ಥಳ : ದಾವಣಗೆರೆ
ದಿನಾಂಕ : 25-06-2024

ಹುಟ್ಟುಹಬ್ಬದ ಶುಭಾಶಯಗಳು



ಶ್ರೀ ಬಸವರಾಜು ವಿ ಶಿವಗಂಗಾ    ಶ್ರೀ ಶಿವಕುಮಾರ್ ಆರ್.

ಸ್ನೇಹ ಜೀವಿಗಳೂ, ಯುವ ಮುಖಂಡರೂ, ಆತ್ಮೀಯರೂ ಆದ
ಶ್ರೀ ಬಸವರಾಜು ವಿ. ಶಿವಗಂಗಾ
ಹಾಗೂ
ಶ್ರೀ ಶಿವಕುಮಾರ್ ಆರ್.
ಇವರುಗಳಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.
ಭಗವಂತನು ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

* ಚಕ್ರಪಾಣಿ ಕೆ. ಬಿ.
* ರಾಘವೇಂದ್ರ, ಜಿ.ಆರ್. ಗ್ರಾ.ಪಂ.ಸದಸ್ಯರು
* ಅಶೋಕ್ ತಳವಾರ್
* ಚೇತನ್ ಮೈಸೂರು (ಚೌಧರಿ)
* ಶ್ರೀನಿವಾಸ ತಾಳ್ಯ, ಗ್ರಾ.ಪಂ.ಸದಸ್ಯರು
* ಅರುಣ್ ಶಿಂಧೆ (ಆರ್.ಟಿ.ಓ.)
* ರಘು (ಸೈನ್ಸ್ ಅಕಾಡೆಮಿ)
* ಮನ್ಸೂರ್
* ಮುರುಗೇಶ್, (ದುರ್ಗಾಂಬಿಕ ಕ್ಯಾಂಟೀನ್)
* ಪ್ರಶಾಂತ್, ಈಶ್ವರ್ ರೆಡಿಯೋ & ಟಿ.ವಿ
* ರುದ್ರೇಶ (ದುರ್ಗಾಂಬಿಕ ಕ್ಯಾಂಟೀನ್) DTS
* ಭರತ್, ಕೃಷಿಕರು
* ಅಂಜಿನಿ ನಿಟುವಳ್ಳಿ
* ರಾಕೇಶ್ (ಪಿಂಟೂ)
* ಸ್ಟಾರ್ ಪಚ್ಚಿ
* ಧರಣೇಂದ್ರ ಪ್ರಸಾದ್
* ಸಂತೋಷ್ ಪಾಟೀಲ್
* ವೀರೇಶ್ ಪಾಟೀಲ್
* ಲಂಕೇಶ್ * ಶಶಿ

ಹಾಗೂ ಗೆಳೆಯರ ಬಳಗ

## ಕೆರೆ ಭರ್ತಿ: ಮಲ್ಲಶೆಟ್ಟಿಹಳ್ಳಿ ಗ್ರಾಮಸ್ಥರ ಸಂತಸ



ದಾವಣಗೆರೆ, ಜು. 28- ಮಲ್ಲಶೆಟ್ಟಿ ಹಳ್ಳಿ ಬಳಿಯ ಕೆರೆ ತುಂಬಿದ್ದು, ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಮಾಯಕೊಂಡ ಶಾಸಕ ಬಸವಂತಪ್ಪ ಮಲ್ಲಶೆಟ್ಟಿ ಹಳ್ಳಿ ಬಳಿಯ ಜಾಕ್‌ವೆಲ್‌ಗೆ ಭೇಟಿ ನೀಡಿ ಬರಿದಾಗಿರುವ ಕೆರೆಗೆ ನೀರು ತುಂಬಿಸುವ ಕುರಿತು ಅಧಿಕಾರಿಗಳಿಗೆ ತಾಕೀತು ಮಾಡಿದ್ದರು. ಈ ವರದಿ ಜನತಾವಾಣಿ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು.

ವರದಿ ಪ್ರಕಟಗೊಂಡ ಮರುದಿನವೇ ಅಧಿಕಾರಿಗಳು ಕಾರ್ಯೋನ್ಮುಖರಾಗಿದ್ದು, ಕೆರೆಗೆ ನೀರು ಹರಿದು ಬಂದಿದೆ. ಮಲ್ಲಶೆಟ್ಟಿ ಹಳ್ಳಿಯ ಅವಿನಾಶ್ ಹಾಗೂ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ.

## ಸ್ವಾಮೀಜಿಗಳಿಗೂ-ರಾಜಕೀಯಕ್ಕೂ ಸಂಬಂಧವಿಲ್ಲ

ಬೆಂಗಳೂರು, ಜೂ. 28 – ಸ್ವಾಮೀಜಿಗಳಿಗೂ-ರಾಜಕೀಯಕ್ಕೂ ಸಂಬಂಧ ಇಲ್ಲ. ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ನಿರ್ಧರಿಸಿರುವವರು ಶಾಸಕರು ಹಾಗೂ ಹೈಕಮಾಂಡ್ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮುಖ್ಯಮಂತ್ರಿ ಸ್ಥಾನದ ಕುರಿತು ಕೆಲ ಸ್ವಾಮೀಜಿಗಳು ನೀಡಿರುವ ಹೇಳಿಕೆಯ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಸ್ವಾಮೀಜಿಗೂ-ರಾಜಕೀಯ ಪಕ್ಷಕ್ಕೂ ಏನಾದರೂ ಸಂಬಂಧ ಇದೆಯಾ? ಯಾರು ಮುಖ್ಯಮಂತ್ರಿ ಆಗಬೇಕು ಎಂಬುದನ್ನು ತೀರ್ಮಾನಿಸುವವರು ಶಾಸಕರು ಹಾಗೂ ಹೈಕಮಾಂಡ್ ಎಂದು ಹೇಳಿದರು.

# ಗಂಗಾಮತಸ್ಥ ಸಮಾಜದ ಪರಂಪರೆ ಉಳಿಸಿ, ಬೆಳೆಸಿ

## ಶ್ರೀ ಗಂಗಾಪರಮೇಶ್ವರಿ ಜಯಂತ್ಯುತ್ಸವದಲ್ಲಿ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಕರೆ





ದಾವಣಗೆರೆ, ಜೂ. 28- ಗಂಗಾ ಮತಸ್ಥ ಸಮಾಜ ಮೊದಲು ಸಂಘಟಿತ ವಾಗುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು. ತನ್ಮೂಲಕ ತಾಯಂದಿರು ಸಮಾಜದ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಿಳಿಸಲು ಕಾರ್ಯ ಪ್ರವೃತ್ತರಾಗಬೇಕೆಂದು ಅಂಬಿಗರ ಚೌಡಯ್ಯ ಗುರುಪೀಠದ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಕರೆ ನೀಡಿದರು.

ನಗರ ದೇವತೆ ಶ್ರೀ ದುರ್ಗಾಂಬಿಕ ದೇವಸ್ಥಾನದ ಹತ್ತಿರವಿರುವ ಶ್ರೀ ನಿಮಿಷಾಂಬ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಗಂಗಾಮತಸ್ಥ ಸಂಘದ ವತಿಯಿಂದ ಇಂದು ಹಮ್ಮಿಕೊಂಡಿದ್ದ ಶ್ರೀ ಗಂಗಾಪರಮೇಶ್ವರಿ ಜಯಂತ್ಯುತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಸಮಾಜದ ತಾಯಂದಿರು ಜಾಗೃತರಾಗಿ ಸಮಾಜದ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವು ದಲ್ಲದೇ ಮುಂದಿನ ಪೀಳಿಗೆಗೆ ತಿಳಿಸಿಕೊಡುವ ಅಗತ್ಯವಿದೆ ಎಂದರು.

ಜಿಲ್ಲಾ ಗಂಗಾಮತಸ್ಥ ಸಮಾಜದ ಅಧ್ಯಕ್ಷ ಬಿ.ಕೆ. ಮಂಜುನಾಥ್ ಮಾಗಾನಹಳ್ಳಿ ಮಾತನಾಡಿ, ಗಂಗಾಮತಸ್ಥ ಸಮಾಜ ಸಂಘದಿಂದ ಸಾಕಷ್ಟು ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಈಗಾಗಲೇ ಸಮಾಜದ ಸುಸಜ್ಜಿತ ಕಟ್ಟಡ ಕೂಡ ನಿರ್ಮಾಣವಾಗಿದೆ.

ಸಮಾಜದ ಬಡ ಮಕ್ಕಳಿಗೆ ಸಹಾಯ ಕೂಡ ಮಾಡ ಲಾಗುತ್ತಿದೆ. ಎಲ್ಲಾ ಕಾರ್ಯಚಟುವಟಿಕೆಗಳಿಗೆ ಸಮಾಜದ ಸರ್ವರೂ ಪ್ರೋತ್ಸಾಹಿಸಿದಾಗ ಇನ್ನೂ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಮಾಡಲು ಉತ್ಸಾಹ ಬರುತ್ತದೆ ಎಂದರು.

ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಗಂಗಾಪರಮೇಶ್ವರಿ ಜಯಂತ್ಯುತ್ಸವದ ಅಂಗವಾಗಿ 108 ಮಹಿಳೆಯರ ಪೂರ್ಣಕುಂಭ ಮೇಳ ಕೂಡ ನಡೆಯಿತು.

ಕಾರ್ಯಕ್ರಮದಲ್ಲಿ ಸಮಾಜದ ಮುಖಂಡ ರಾದ ಪುಟಗನಾಳ್ ಮಂಜುನಾಥ್, ಕೆಂಚನಹಳ್ಳಿ ಮಹಾಂತಪ್ಪ, ಯೋಗರಾಜ್, ವಕೀಲರಾದ ಉಮೇಶ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ಸದಸ್ಯ ಅಜಯ್ ಕುಮಾರ್, ಲಿಂಗರಾಜ್, ರವಿಕುಮಾರ್, ಚಂದ್ರಪ್ಪ, ಬಾತಿ ಕೆಂಚಪ್ಪ, ಅಶೋಕ್ ಕೋಲ್ಕುಂಟೆ, ವಾಗೀಶ್, ಗಣೇಶ್, ಗಂಗಪ್ಪ ಸೇರಿದಂತೆ ಅನೇಕರಿದ್ದರು.

## ಕಂದಾಯ ಹೆಚ್ಚಳ : ಆಯುಕ್ತರ ಜೊತೆ ಚರ್ಚೆ



ದಾವಣಗೆರೆ, ಜೂ.28- ಎಂ.ಸಿ. ಕಾಲೋನಿಯಲ್ಲಿ ನಾಗರಿಕರ ಹಿತರಕ್ಷಣಾ ಸಮಿತಿಯಿಂದ ನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರನ್ನು ನಿನ್ನೆ ಭೇಟಿ ಮಾಡಿ 2024-25 ನೇ ಸಾಲಿನ ಮನೆ ಕಂದಾಯ ಹೆಚ್ಚಳದ ಕುರಿತು ಮತ್ತು ಈ ಭಾಗದ ನಾಗರಿಕ ಸಮಸ್ಯೆ ಬಗ್ಗೆ ಚರ್ಚೆ ಮಾಡಲಾಯಿತು.

ಎಂ.ಸಿ. ಕಾಲೋನಿಯಲ್ಲಿ ನಾಗರಿಕರ ಹಿತರಕ್ಷಣಾ ಸಮಿತಿ ಅಧ್ಯಕ್ಷ ಅಂದನೂರು ಮುಪ್ಪಣ್ಣ, ಕಾರ್ಯದರ್ಶಿ ವಸಂತ ಶಾಮನೂರು, ಪದಾಧಿಕಾರಿಗಳಾದ ಬಿ.ಹೆಚ್. ಪರಶುರಾಮಪ್ಪ, ಎಸ್.ಸಿ. ಹುಲ್ಲತ್ತಿ, ಹಾಲಪ್ಪ, ನಾಗಭೂಷಣ ಕಡೇಕೊಪ್ಪ ಮತ್ತಿತರರು ಆಯುಕ್ತರನ್ನು ಭೇಟಿ ಮಾಡಿದ್ದರು.

## ಪುರಸಭೆಗೆ ಐವರು ನಾಮ ನಿರ್ದೇಶನ

ಮಲೇಬೆನ್ನೂರು, ಜೂ.28- ಇಲ್ಲಿನ ಪುರಸಭೆಗೆ ಪಟ್ಟಣದ ಐವರು ಕಾಂಗ್ರೆಸ್ ಕಾರ್ಯಕರ್ತರನ್ನು ಸರ್ಕಾರ ನಾಮನಿರ್ದೇಶನ ಮಾಡಿ ಆದೇಶ ಹೊರಡಿಸಿದೆ.

ಬಿ.ವೀರಯ್ಯ, ಎ.ಆರೀಫ್ ಅಲಿ, ಬುಡ್ಡವ್ವರ ಅಬ್ದುಲ್ ರಫೀಕ್, ಎಕ್ಕೆಗೊಂದಿ ಕರಿಯಪ್ಪ ಮತ್ತು ಟಿ.ಬಸವರಾಜ್ ಇವರು ನಾಮನಿರ್ದೇಶಿತ ಸದಸ್ಯರಾಗಿದ್ದಾರೆ.

# ಆರ್. ಅಶೋಕ್ ಅವ್ಯವಹಾರಗಳ ನ್ಯಾಯಾಂಗ ತನಿಖೆಯಾಗಲಿ



ಬೆಂಗಳೂರು, ಜೂ.28- ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ವಿರುದ್ದ ಭೂ ಹಗರಣ ಹಾಗೂ ಈ ಹಿಂದೆ ಸಾರಿಗೆ ಸಚಿವರಾಗಿದ್ದ ವೇಳೆ ಬಸ್ ಖರೀದಿಯಲ್ಲಿ ಅವ್ಯವಹಾರ ನಡೆಸಿದ್ದು ಈ ಬಗ್ಗೆ ನ್ಯಾಯಾಂಗ ತನಿಖೆಯಾಗಲಿ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಹಾಗೂ ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಆಗ್ರಹಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ಹೊರಡಿಸಿರುವ ಅವರು, ಇತಿಹಾಸದಲ್ಲಿ ಅನೇಕ ಸಮರ್ಥ ವಿರೋಧ ಪಕ್ಷದ ನಾಯಕರನ್ನು ಕಂಡ ವಿಧಾನಸಭೆಯು, ಇಂದು ಸಮರ್ಥ ವಿರೋಧ ಪಕ್ಷದ ನಾಯಕರಿಲ್ಲದೆ ಸೊರಗುತ್ತಿದೆ ಎಂದಿದ್ದಾರೆ.

ಅಶೋಕ್ ವಿರುದ್ಧ ಕರ್ನಾಟಕ ಲೋಕಾಯುಕ್ತದಲ್ಲಿ ದೂರು ಸಂಖ್ಯೆ BCD /563/2010 ಇಂದಿಗೂ ವಿಚಾರಣೆಗೆ ಬಾಕಿ ಇದ್ದು ಯಾವ ಕಾರಣಕ್ಕೆ ಪ್ರಕರಣ ಬಾಕಿ ಇದೆ ಎಂದು ವಿರೋಧ ಪಕ್ಷದ ನಾಯಕರು ಸಾರ್ವಜನಿಕವಾಗಿ ಉತ್ತರಿಸಬೇಕು. ತಮ್ಮ ಚುನಾವಣಾ ಪ್ರಮಾಣ ಪತ್ರದಲ್ಲಿ ಬಾಕಿ ಇರುವ ಅಪರಾಧ ಪ್ರಕರಣಗಳ ಕುರಿತು ಅಪೂರ್ಣ ಮಾಹಿತಿ ನೀಡಿರುವ ಮಾನ್ಯ ವಿರೋಧ ಪಕ್ಷದ ನಾಯಕರು, ತಮ್ಮ ವಿರುದ್ಧ ಬಾಕಿ ಇರುವ ಕ್ರಿಮಿನಲ್ ಪ್ರಕರಣಗಳ ಕುರಿತು ಪೂರ್ಣ ಮಾಹಿತಿಯನ್ನು ಸಾರ್ವಜನಿಕವಾಗಿ ಬಹಿರಂಗಗೊಳಿಸ ಬೇಕು ಎಂದು ರಮೇಶ್ ಬಾಬು ಆಗ್ರಹಿಸಿದರು.

ತಮ್ಮ ರಾಜಕೀಯ ಮತ್ತು ವ್ಯಾಪಾರ ಲಾಭಕ್ಕಾಗಿ ನಂದಿನಿ ಸಂಸ್ಥೆಯನ್ನೇ ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಮುಂದಾಗಿದ್ದ ಕೇಂದ್ರದ ಬಿಜೆಪಿ ಸರ್ಕಾರವನ್ನು ಟೀಕಿಸದ ಅಶೋಕ್ ಇಂದು ಹಾಲುದರದ ಬಗ್ಗೆ ಪ್ರಸ್ತಾಪಿಸುತ್ತಿರುವುದು ಅವರ ಅಪಕ್ವ ನಾಯಕತ್ವಕ್ಕೆ ಸಾಕ್ಷಿಯಾಗಿದೆ ಎಂದರು.

ವಿಧಾನಸಭೆಗೆ ಒಬ್ಬ ಸಮರ್ಥ ವಿರೋಧ ಪಕ್ಷದ ನಾಯಕರನ್ನು ನೀಡಲು ವಿಫಲವಾಗಿರುವ ಭಾರತೀಯ ಜನತಾ ಪಕ್ಷವು ಸಾರ್ವಜನಿಕವಾಗಿ ಕರ್ನಾಟಕದ ಜನರ ಕ್ಷಮೆ ಕೇಳಬೇಕು ಎಂದು ರಮೇಶ್ ಬಾಬು ಆಗ್ರಹಿಸಿದರು.

## ತರಳಬಾಳು ಶ್ರೀಗಳಿಂದ ತಾಂಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯಕ ಅವರಿಗೆ ಆಶೀರ್ವಾದ



ದಾವಣಗೆರೆ, ಜೂ.28- ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ನಗರದ ಹಿರಿಯ ನ್ಯಾಯವಾದಿ ಎನ್. ಜಯದೇವ ನಾಯಕ ಅವರು ಸಿರಿಗೆರೆಯ ತರಳಬಾಳು ಬೃಹನ್ಮಠಕ್ಕೆ ಭೇಟಿ ನೀಡಿ ಜಗದ್ಗುರು ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರಿಂದ ಆಶೀರ್ವಾದ ಪಡೆದರು.

ಜಯದೇವ ನಾಯಕ ಅವರು ಅನೇಕ ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲೇ ಸಕ್ರಿಯ ಕಾರ್ಯಕರ್ತರಾಗಿ ದುಡಿದ ಫಲಕ್ಕೆ ಸರ್ಕಾರ ನೀಡಿರುವ ಸ್ಥಾನಮಾನಕ್ಕೆ ಸಂತಸ ವ್ಯಕ್ತಪಡಿಸಿದ ಜಗದ್ಗುರುಗಳು, ಬಡ ಲಂಬಾಣಿ ಜನಾಂಗದ ಸರ್ವತೋಮುಖ ಏಳಿಗೆಗೆ ಶ್ರಮಿಸುವಂತೆ ಜಯದೇವ ನಾಯಕ ಅವರಿಗೆ ಕಿವಿಮಾತು ಹೇಳಿದರು.

# ಸರ್ಕಾರದ 6ನೇ ಗ್ಯಾರಂಟಿಯೇ ಬೆಲೆ ಏರಿಕೆ



**ಉಮಾ ವ್ಯಂಗ್ಯ**

ದಾವಣಗೆರೆ, ಜೂ.28- ಪಂಚ ಗ್ಯಾರಂಟಿಗಳ ಜತೆಗೆ ಬೆಲೆ ಏರಿಕೆಯು ಸರ್ಕಾರದ 6ನೇ ಗ್ಯಾರಂಟಿಯಾಗಿದೆ ಎಂದು ಮಾಜಿ ಮೇಯರ್ ಉಮಾ ಪ್ರಕಾಶ್ ವ್ಯಂಗ್ಯವಾಡಿದ್ದಾರೆ.

ರಾಜ್ಯದ ಜನರಿಗೆ ಗ್ಯಾರಂಟಿ ಯೋಜನೆ ಕೊಡುತ್ತಿರುವ ಕಾಂಗ್ರೆಸ್ ಸರ್ಕಾರವು ಮನೆ ಕಂದಾಯ, ನೀರಿನ ಕಂದಾಯ, ಸ್ಟಾಂಪ್ ಶುಲ್ಕ, ಅಬಕಾರಿ ಸುಂಕ, ಪೆಟ್ರೋಲ್, ಡೀಸೆಲ್ ಬೆಲೆ ಮತ್ತು ಹಾಲಿನ ದರ ಹೆಚ್ಚಳ ಮಾಡುವ ಮೂಲಕ 6ನೇ ಗ್ಯಾರಂಟಿಯಾಗಿ ಜನರಿಂದ ವಾಪಸ್ ಹಣ ಕಿತ್ತುಕೊಳ್ಳುತ್ತಿದೆ ಎಂದು ಆರೋಪಿಸಿದ್ದಾರೆ.

ಸರ್ಕಾರ ನಡೆಸುವವರು ತೊಘಲಕ್ ದರ್ಬಾರ್ ನಡೆಸುತ್ತಿದ್ದಾರೆ. ಬಡವರಿಗಷ್ಟೇ ಗ್ಯಾರಂಟಿ ಯೋಜನೆ ಕೊಡುವುದನ್ನು ಬಿಟ್ಟು, ಅನುಕೂಲಸ್ಥರಿಗೂ ಸರ್ಕಾರದ ಪುಕ್ಕಟೆ ಯೋಜನೆ ನೀಡಿ ಸರ್ಕಾರದ ಬೊಕ್ಕಸ ಖಾಲಿ ಮಾಡಿದ್ದಾರೆ ಎಂದು ಟೀಕಿಸಿದ್ದಾರೆ.

ಈಗ ಬೊಕ್ಕಸ ತುಂಬಿಕೊಳ್ಳಲು ಬೆಲೆ ಏರಿಕೆ ಎಂಬ 6ನೇ ಗ್ಯಾರಂಟಿಯನ್ನು ಚುನಾವಣೆ ಮುಂಚೆ ಘೋಷಿಸದೇ ಇಂದು ಬೆಲೆ ಏರಿಕೆ ಮಾಡುತ್ತಿದ್ದಾರೆ.

ರಾಜ್ಯದ ಜನತೆ ಇನ್ನೂ ಯಾವ-ಯಾವ ಬೆಲೆ ಏರಿಕೆ ಮಾಡುತ್ತಾರೆ ಎಂದು 6ನೇ ಗ್ಯಾರಂಟಿಯ ಬಗ್ಗೆ ಚಿಂತಿಸುತ್ತಿದ್ದಾರೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

## ತುಂಗಭದ್ರೆಯಲ್ಲಿ ಹೆಚ್ಚಿದ ಹರಿವು



ಹರಿಹರ, ಜೂ.28- ಆಗುಂಬೆ, ಶೃಂಗೇರಿ ಸೇರಿದಂತೆ ಮಲೆನಾಡು ಪ್ರದೇಶಗಳಲ್ಲಿ ಮುಂಗಾರು ಮಳೆ ಹೆಚ್ಚಾಗಿ ಸುರಿಯುತ್ತಿರುವ ಕಾರಣ ನಗರದ ತುಂಗಭದ್ರಾ ನದಿಯಲ್ಲಿ, ದಿನದಿಂದ ದಿನಕ್ಕೆ, ನೀರಿನ ಹರಿವಿನ ಪ್ರಮಾಣವು ಹೆಚ್ಚಾಗುತ್ತಾ ಸಾಗಿದೆ. ರಾಜ್ಯದಾದ್ಯಂತ ಇನ್ನೂ ನಾಲ್ಕರಿಂದ ಐದು ದಿನಗಳ ಕಾಲ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು, ನದಿ ತೀರದ ಆಸು ಪಾಸಿನಲ್ಲಿ ವಾಸಿಸುವಂತಹ ಜನರು ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಮತ್ತು ಜಾನುವಾರುಗಳನ್ನು ನದಿಯಲ್ಲಿ ಬಿಡದಂತೆ ಎಚ್ಚರಿಕೆ ವಹಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ವೊಡಫೋನ್ ಐಡಿಯಾ ದರ ಹೆಚ್ಚಳ

ನವದೆಹಲಿ, ಜೂ. 28 – ವೊಡಫೋನ್ ಐಡಿಯಾ ತನ್ನ ಮೊಬೈಲ್ ಸೇವಾ ದರವನ್ನು ಶೇ.11-24ರಷ್ಟು ಹೆಚ್ಚಿಸಿದೆ. ಜುಲೈ 4ರಿಂದ ಹೆಚ್ಚಳ ಜಾರಿಗೆ ಬರಲಿದೆ. ರಿಲೈಯನ್ಸ್ ಜಿಯೋ ಹಾಗೂ ಭಾರತಿ ಏರ್‌ಟೆಲ್‌ಗಳೂ ಸಹ ಮೊಬೈಲ್ ಸೇವಾ ದರಗಳನ್ನು ಹೆಚ್ಚಿಸಿವೆ. 28 ದಿನಗಳ ಮೊಬೈಲ್ ಸೇವೆಯ ದರವನ್ನು 179 ರೂ.ಗಳಿಂದ 199 ರೂ.ಗಳಿಗೆ ಹೆಚ್ಚಿಸಲಾಗಿದೆ.

### ಭದ್ರಾ ಜಲಾಶಯ

ನೀರಿನ ಮಟ್ಟ : 122 ಅಡಿ 3 ಇಂಚು
ಒಳ ಹರಿವು : 8655 ಕ್ಯೂಸೆಕ್ಸ್
ಹೊರ ಹರಿವು : 345ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 0 ಇಂಚು

## ನಗರದಲ್ಲಿ ಇಂದು ಗಾಯನ



ಸಿನಿ ಹನಿ ಸವಿಗಾನದಿನಿದಿನಿಯ ವತಿಯಿಂದ ಸಾಹಸ ಸಿಂಹ ಡಾ. ವಿಷ್ಣುವರ್ಧನ್ ಅಭಿನಯದ ಗೀತೆಗಳ ಗಾಯನ ಪ್ರಸ್ತುತಿ ಕಾರ್ಯಕ್ರಮವನ್ನು ಇಂದು ಸಂಜೆ 5.30ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ : 99008-44101.

## ನಗರದ ಇಂದು ಯತ್ನಿಕ್ ಡೇ

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಯತ್ನಿಕ್ ಡೇ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿ : ಡಾ. ಅಥಣಿ ಎಸ್.ವೀರಣ್ಣ ಮತ್ತು ಸಂಜೆ 5 ಗಂಟೆಗೆ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿ : ಪ್ರೊ. ಬಾತಿ ಬಸವರಾಜ್. ಅಧ್ಯಕ್ಷತೆ : ಡಾ.ಬಿ.ವೀರಪ್ಪ.


ಹುಟ್ಟುಹಬ್ಬದ ಶುಭಾಶಯಗಳು



ವಂದೇ ಮಾತರಂ ಸ್ವಯಂ ಸೇವಾ ಸಂಸ್ಥೆಯ ಸಂಸ್ಥಾಪಕರು, ಬಡವರ, ದೀನ- ದಲಿತರ ಹಿತೈಷಿಗಳು, ಹಿಂದೂ ಸಮಾಜದ ಹಿತಚಿಂತಕರೂ, ನಗರಸಭೆ ಸದಸ್ಯರು, ಆತ್ಮೀಯರಾದ

ಶ್ರೀ ಪ್ರಕಾಶ ಬುರಡಿಕಟ್ಟಿ

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು....

ಸರ್ವ ಸದಸ್ಯರು

ವಂದೇ ಮಾತರಂ ಸ್ವಯಂ ಸೇವಾ ಸಂಸ್ಥೆ, ರಾಣೇಬೆನ್ನೂರು, ಬಂಧುಗಳು ಹಾಗೂ ಮಿತ್ರರು.


# ಸ್ಥಾನಮಾನಗಳು ಸಮಾಜ ಸೇವೆಗೆ ದೊರೆತ ಅವಕಾಶ



### ಜಿಲ್ಲಾ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ

ದಾವಣಗೆರೆ, ಜೂ.28- ಸಾರ್ವಜನಿಕ ಜೀವನದಲ್ಲಿ ಸ್ಥಾನಮಾನಗಳು, ಸಮಾಜ ಸೇವೆಗೆ ದೊರೆತ ಅವಕಾಶ ಎಂದು ಭಾವಿಸಿ ಕರ್ತವ್ಯ ನಿರ್ವಹಿಸಿದರೆ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ರಾಜ್ಯ ತಾಂಡಾ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವ ಹಿರಿಯ ವಕೀಲ ಎನ್. ಜಯದೇವನಾಯ್ಕ ಅವರನ್ನು ಸನ್ಮಾನಿಸಲು ಜಿಲ್ಲಾ ವಕೀಲರ ಸಂಘದ ವತಿಯಿಂದ ವಕೀಲರ ಭನದಲ್ಲಿ ಇಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾವುದೇ ವ್ಯಕ್ತಿಗೆ ಅಧಿಕಾರ ದೊರೆತಾಗ ಹೆಚ್ಚು ವಿನಯವಂತರಾಗಬೇಕು ಜತೆಗೆ ಸಾರ್ವಜನಿಕರ ಸಮಸ್ಯೆ ಆಲಿಸಿ ಜನರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುವ ಹೃದಯವಂತಿಕೆ ಹೊಂದಿದಾಗ ಮಾತ್ರ ಸ್ಥಾನಮಾನದ ಜತೆಗೆ ವ್ಯಕ್ತಿಯ ವ್ಯಕ್ತಿತ್ವ ಬೆಳಗಲು ಸಾಧ್ಯ ಎಂದರು.

ಸಾರ್ವಜನಿಕ ರಂಗದಲ್ಲಿ ನಿಸ್ವಾರ್ಥತೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡುವವರ ಸಂಖ್ಯೆ ಕಡಿಮೆ ಆಗುತ್ತಿದ್ದು, ಈ ನಿಟ್ಟಿನಲ್ಲಿ ಇಂದು ಯುವ ಜನತೆಗೆ ಆದರ್ಶ ಹೇಳಿಕೊಡುವ, ಆದರ್ಶವಾದ ವ್ಯಕ್ತಿತ್ವದ ಅವಶ್ಯಕತೆ ಇದೆ ಎಂದು ಹೇಳಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಎನ್. ಜಯದೇವನಾಯ್ಕ ಅವರು, ರಾಜಕಾರಣದಲ್ಲಿ ಪ್ರಾಮಾಣಿಕತೆ, ಬದ್ಧತೆ ಮತ್ತು ತತ್ವ ಸಿದ್ಧಾಂತಗಳು ಕಣ್ಮರೆ ಆಗುತ್ತಿವೆ, ಜನತೆ ರಾಜಕೀಯದಿಂದ ವಿಮುಖರಾಗುತ್ತಿದ್ದಾರೆ ಎಂದ ಅವರು, ನನಗೆ ದೊರೆತ ಸ್ಥಾನಮಾನವನ್ನು ಶೋಷಿತರ ಅಭಿವೃದ್ಧಿ ಮತ್ತು ಸಾರ್ವಜನಿಕರ ಒಳಿತಿಗಾಗಿ ಮೀಸಲಿಡುತ್ತೇನೆ ಎಂದು ಹೇಳಿದರು.

ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಎಚ್. ಅರುಣ್‌ಕುಮಾರ್ ಮಾತನಾಡಿ, ಜೂನ್ 28, 1922ರಂದು ಅಂಬೇಡ್ಕರ್ ಅವರು ವಕೀಲರಾದ ದಿನವಾಗಿದ್ದು, ಅವರ ಅಧ್ಯಕ್ಷತೆಯಲ್ಲಿ ರಚನೆಯಾದ ಸಂವಿಧಾನದ ಎಲ್ಲಾ ಅಂಗಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಹೇಳಿದರು.

ಸಂವಿಧಾನದ ಸಹಾಯದಿಂದ ಸಾಮಾನ್ಯರೂ ದೇಶದ ಉನ್ನತ ಹುದ್ದೆ ಅಲಂಕರಿಸುವ ಅವಕಾಶಗಳು ದೊರೆತಿವೆ. ಜಯದೇವನಾಯ್ಕರು ಸಂವಿಧಾನದ ಆದರ್ಶಗಳಿಗೆ ಅನುಗುಣವಾಗಿ ಸಾಮಾಜಿಕ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗುವ ಅಚಲವಾದ ನಂಬಿಕೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಮಹಾವೀರ ಮ. ಕರೆಣ್ಣವರ್, ಹಿರಿಯ ವಕೀಲ ಎಚ್.ಎನ್.ರಾಜಶೇಖರಪ್ಪ, ರಾಮಚಂದ್ರ ಕಲಾಲ್, ಡಿ.ಪಿ. ಬಸವರಾಜ್, ಎನ್.ಎಂ.ಆಂಜನೇಯ, ಮಲ್ಲೇಶ್ ನಾಯ್ಕ, ಟಿ.ಎಚ್.ಸಿದ್ದಪ್ಪ ಲೋಕಿಕೆರೆ, ತಿಪ್ಪೇಶ್ ರಾಥೋಡ್ ಮಾತನಾಡಿದರು.

ಈ ವೇಳೆ ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಎಸ್. ಬಸವರಾಜ್, ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳು, ಕಾರ್ಯಕಾರಿ ಸಮಿತಿ ಸದಸ್ಯ ಕೆ.ಎಂ. ನೀಲಕಂಠಯ್ಯ, ಟಿ.ಎಚ್. ಮಧುಸೂದನ್, ವಾಗೀಶ್ ಕಟ್ಟಿಗಿಹಳ್ಳಿ ಮಠ, ಎಂ. ಚೌಡಪ್ಪ, ಎಲ್. ನಾಗರಾಜ್ ಇತರರಿದ್ದರು.

## ನೀಟ್ ಚರ್ಚೆಗಾಗಿ ಸದನದ ಬಾವಿಗೆ ನುಗ್ಗಿದ ಖರ್ಗೆ

ನವದೆಹಲಿ, ಜೂ. 28 – ನೀಟ್ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚೆಗೆ ಅವಕಾಶ ನೀಡಬೇಕು ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಇತರೆ ಸದಸ್ಯರ ಜೊತೆ ಸದನದ ಬಾವಿಗೆ ನುಗ್ಗಿದ ಘಟನೆ ನಡೆದಿದೆ.

ಈ ಬಗ್ಗೆ ಪತ್ರಕರ್ತರೊಂದಿಗೆ ಮಾತನಾಡಿರುವ ಖರ್ಗೆ, ನಾನು ಬಹಳ ಹೊತ್ತು ಕೈ ಮೇಲೆತ್ತಿ ಸಮಯಕ್ಕಾಗಿ ಕಾದೆ. ಆದರೆ, ರಾಜ್ಯಸಭಾಧ್ಯಕ್ಷರು ನನ್ನ ಕಡೆ ನೋಡಲಿಲ್ಲ, ಅವರು ಆಡಳಿತಾರೂಢರ ಕಡೆ ಗಮನ ಹರಿಸುತ್ತಿದ್ದರು ಎಂದರು.

ಸಭಾಧ್ಯಕ್ಷರ ಗಮನ ಸೆಳೆಯಲು ನಾನು ಸದನದ ಬಾವಿಗೆ ಹೋಗುವ ಅನಿವಾರ್ಯತೆ ಎದುರಾಯಿತು. ರಾಜ್ಯಸಭಾಧ್ಯಕ್ಷರು ಸಂಸದರನ್ನು ಅಗೌರವಿಸುತ್ತಿದ್ದಾರೆ ಎಂದರು.

ಸದನದ ಬಾವಿಗೆ ಖರ್ಗೆ ಬಂದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದ ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್, ಪ್ರತಿಪಕ್ಷದ ನಾಯಕನ ಸ್ಥಾನದಲ್ಲಿರುವವರು ಇದೇ ಮೊದಲ ಬಾರಿಗೆ ಈ ರೀತಿ ವರ್ತಿಸಿದ್ದಾರೆ ಎಂದು ಹೇಳಿದರು.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas